ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ

**ಕರ್ನಾಟಕ ಸರ್ಕಾರ**
**ಪಂಚಾಯತ್ ರಾಜ್ ಆಯುಕ್ತಾಲಯ**
**ಕಾಳಿದಾಸ ರಸ್ತೆ, ಗಾಂಧಿನಗರ ಬೆಂಗಳೂರು – 560 009.**

ಸಂಖ್ಯೆ:ಕಪಂರಾಆ/ಅಭಿವೃದ್ಧಿ/536/2021 ದಿನಾಂಕ:19.04.2022

**:ಸುತ್ತೋಲೆ:**

**ವಿಷಯ:** ಮಕ್ಕಳ ಹಕ್ಕುಗಳ ರಕ್ಷಣೆಗಾಗಿ 01 ಮೇ ರಿಂದ 30 ಜುಲೈ 2022 ರವರೆಗೆ, 12 ವಾರಗಳ "ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ" ಮತ್ತು ಗ್ರಾಮ ಪಂಚಾಯಿತಿಗಳಲ್ಲಿ ಒಂದು ದಿನ "ಮಕ್ಕಳ ವಿಶೇಷ ಗ್ರಾಮ ಸಭೆ" ನಡೆಸುವ ಕುರಿತು.

**ಉಲ್ಲೇಖ**
1. ಕರ್ನಾಟಕ ಗ್ರಾಮಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಅಧ್ಯಾಯ IIರ ಪ್ರಕರಣ 3(ಎಚ್)(2)(i)ಮತ್ತು ಅಧ್ಯಾಯ ivರ ಪ್ರಕರಣ 61-A
2. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 367 ಗ್ರಾಪಂಅ 2006 ದಿನಾಂಕ 18-09-2006
3. ಸರ್ಕಾರದ ಸುತ್ತೋಲೆ ಸಂಖ್ಯೆ: ಕಪಂರಾಆ/ಅಭಿವೃದ್ಧಿ/93/2020 ದಿನಾಂಕ 04-11-2020 ಮತ್ತು ದಿನಾಂಕ 02-02-2021
4. ಸರ್ಕಾರದ ಸುತ್ತೋಲೆ ಸಂಖ್ಯೆ: ಕಪಂರಾಆ/ಅಭಿವೃದ್ಧಿ/144/2021 ದಿನಾಂಕ 30-10-2021

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಸರ್ಕಾರವು ಮಕ್ಕಳ ಹಕ್ಕುಗಳ ರಕ್ಷಣೆ ಹಾಗೂ ಮಕ್ಕಳ ಭಾಗವಹಿಸುವಿಕೆ ಹಕ್ಕು ಹಿನ್ನೆಲೆಯಲ್ಲಿ ಗ್ರಾಮ ಪಂಚಾಯತಿಗಳಿಂದ ಮಕ್ಕಳ ಗ್ರಾಮ ಸಭೆಯನ್ನು ನಡೆಸಲು 2006 ರಲ್ಲಿ ಉಲ್ಲೇಖ(1) ಕರ್ನಾಟಕ ಗ್ರಾಮಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮದ ಅಧ್ಯಾಯ II ರ ಪ್ರಕರಣ 3(ಎಚ್)(2)(I)ರಲ್ಲಿ (2015ರ ತಿದ್ದುಪಡಿಯಂತೆ)ರಲ್ಲಿ ನಿರ್ದೇಶಿಸಿರುವಂತೆ ಪ್ರಮುಖವಾದ ನಿಲುವನ್ನು ತೆಗೆದುಕೊಂಡಿದೆ. ಇದು ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆ 1989, ಭಾರತದ ಸಂವಿಧಾನದಲ್ಲಿ ಮಕ್ಕಳಿಗಿರುವ ಹಕ್ಕುಗಳನ್ನು ಮಾನ್ಯ ಮಾಡುವುದರಲ್ಲಿ ಮಹತ್ತರವಾದ ಹೆಜ್ಜೆಯಾಗಿದೆ. 2006ರಲ್ಲಿ ಉಲ್ಲೇಖ(2)ರ ಸುತೋಲೆಯನ್ನು ಹೊರಡಿಸುವುದರ ಮೂಲಕ ಗ್ರಾಮೀಣಾಭಿವೃದ್ಧಿಯಲ್ಲಿ ಮಕ್ಕಳ ಭಾಗವಹಿಸುವಿಕೆಗೆ ಅವಕಾಶ ನೀಡಲಾಗಿದೆ. 2006 ರಿಂದ ಪ್ರತಿ ವರ್ಷವೂ ಮಕ್ಕಳ ಗ್ರಾಮ ಸಭೆಯನ್ನು ನಡೆಸಿಕೊಂಡು ಬರಲಾಗುತ್ತಿದೆ.

ಭಾರತ ಸರ್ಕಾರವು, ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿಗಳು 2030 ನ್ನು ಒಪ್ಪಿಕೊಂಡಿದ್ದು, ಮಕ್ಕಳ ಆರೋಗ್ಯ ರಕ್ಷಣೆ, ಶಿಕ್ಷಣ ಅಭಿವೃದ್ಧಿ ಸಾಧನೆ ಹಾಗೂ ಹಸಿವು, ತಾರತಮ್ಯ ಮತ್ತು ಶೋಷಣೆ ಕೊನೆಗೊಳಿಸುವುದಕ್ಕೆ ಬದ್ಧವಾಗಿದೆ. ಈ ಹಿನ್ನೆಲೆಯಲ್ಲಿ ಮಕ್ಕಳ ಪರಿಸ್ಥಿತಿಯನ್ನು ತಳಮಟ್ಟದಿಂದಲೇ ಗಮನಿಸಿ ಆವಶ್ಯಕ ಸುಧಾರಣಾ ಕ್ರಮಗಳನ್ನು ಕೈಗೊಳ್ಳುವುದು ಸರ್ಕಾರದ ಎಲ್ಲಾ ಇಲಾಖೆಗಳು, ಜನಪ್ರತಿನಿಧಿಗಳು ಮತ್ತು ಸಮುದಾಯದ ಜವಾಬ್ದಾರಿಯಾಗಿದೆ. ಮಕ್ಕಳ ರಕ್ಷಣೆಗೆ ಸರ್ವಾಂಗೀಣ ಅಭಿವೃದ್ಧಿಗಾಗಿ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ರೂಪಿಸಿರುವ ಹಲವು ಯೋಜನೆಗಳ ಹಿನ್ನೆಲೆಯಲ್ಲಿ

ಮಕ್ಕಳ ಹಕ್ಕುಗಳನ್ನು ರಕ್ಷಿಸುವುದು ಎಲ್ಲರ ಕರ್ತವ್ಯವಾಗಿರುತ್ತದೆ. ವಿಶ್ವ ಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿಗಳು ಹಾಗೂ ಮಕ್ಕಳಿಗೆ ಸಂಬಂಧಿಸಿದ ಸಮಗ್ರ ಅಭಿವೃದ್ಧಿಯ ಅಂಶಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ '**ಮಕ್ಕಳ ಸ್ನೇಹಿ ಮತ್ತು ಮಕ್ಕಳ ಸುರಕ್ಷಿತ**' ಪಂಚಾಯಿತಿಗಳನ್ನಾಗಿಸಲು ಉಲ್ಲೇಖ(3)ರ ಸುತ್ತೋಲೆಯಲ್ಲಿ **'ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ' ವನ್ನು** ಆಯೋಜಿಸಿ, ಈ ಅವಧಿಯಲ್ಲಿ ಒಂದು ದಿನ ಮಕ್ಕಳ ಗ್ರಾಮ ಸಭೆಯನ್ನು ನಡೆಸಲು ಹಾಗೂ ಕೋವಿಡ್-19ರ ಹರಡುವಿಕೆಯ ಸಮಯದಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಸಹ ವಿವರಿಸಲಾಗಿತ್ತು. 2021ರಲ್ಲಿಯೂ ಉಲ್ಲೇಖ(4)ರ ಸುತ್ತೋಲೆಯ ಮೂಲಕ 14 ರಿಂದ 30 ನವಂಬರ್ 2021ರವರೆಗೆ ಮಕ್ಕಳ ಹಕ್ಕುಗಳ ಜಾಗೃತಿ ಅಭಿಯಾನವನ್ನು ಹಮ್ಮಿಕೊಂಡು ಒಂದು ದಿನ ಮಕ್ಕಳ ವಿಶೇಷ ಗ್ರಾಮ ಸಭೆಯನ್ನು ನಡೆಸಲು ತಿಳಿಸಲಾಗಿತ್ತು. ಆದರೆ, ಚುನಾವಣಾ ನೀತಿ ಸಂಹಿತೆಯ ಪ್ರಯುಕ್ತ ಸದರಿ ಮಕ್ಕಳ ಹಕ್ಕುಗಳ ಜಾಗೃತಿ ಅಭಿಯಾನ ಮತ್ತು ಮಕ್ಕಳ ವಿಶೇಷ ಗ್ರಾಮ ಸಭೆಯನ್ನು ಈ ಕಛೇರಿ ಪತ್ರ ಸಂಖ್ಯೆ: ಕಪಂರಾಅ/ಅಭಿವೃದ್ಧಿ/144/2021 ದಿನಾಂಕ 12-11-2021ರ ಮೂಲಕ ಮುಂದೂಡಲಾಯಿತು ಹಾಗೂ ಚುನಾವಣಾ ನೀತಿ ಸಂಹಿತೆಯ ನಂತರ ಪ್ರತ್ಯೇಕ ಸುತ್ತೋಲೆಯನ್ನು ಹೊಡಿಸಲಾಗುವುದು, ಅದರಂತೆ ಕ್ರಮವಹಿಸುವಂತೆ ಸೂಚಿಸಲಾಗಿತ್ತು. ಲಸಿಕಾಕರಣಕ್ಕೆ ಒತ್ತುಕೊಡಬೇಕಾದ ಕಾರಣದಿಂದ ಅನಿವಾರ್ಯವಾಗಿ ಈ ವರ್ಷದಲ್ಲಿ ಮತ್ತಷ್ಟು ದಿನಗಳು ಮುಂದೂಡಬೇಕಾಯಿತು.

ಮುಂದುವರಿದು, 01 ಮೇ ರಿಂದ 30 ಜುಲೈ 2022 ರವರೆಗೆ ಮಕ್ಕಳ, ವಿವಿಧ ಇಲಾಖೆಗಳ, ಇಲಾಖೇತರರ ಮತ್ತು ಸಮುದಾಯದ ಸಹಭಾಗಿತ್ವದಲ್ಲಿ 'ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ' ವನ್ನು ಹಮ್ಮಿಕೊಂಡು ಈ ಅವಧಿಯಲ್ಲಿ ಒಂದು ದಿನ ಮಕ್ಕಳ ವಿಶೇಷ ಗ್ರಾಮ ಸಭೆಯನ್ನು ಈ ಕೆಳಗೆ ವಿವರಿಸಿರುವಂತೆ ನಡೆಸಲು ನಿರ್ಣಯಿಸಲಾಗಿದೆ.

| | |
|---|---|
| ದಿನಾಂಕ 01-05-2022 ರಿಂದ 15-05-2022 ರವರೆಗೆ | ಮಕ್ಕಳ ಸ್ನೇಹಿ ಗ್ರಾಮ ಪಂಚಾಯಿತಿ ಅಭಿಯಾನ ಮತ್ತು ಒಂದು ದಿನ ಮಕ್ಕಳ ವಿಶೇಷ ಗ್ರಾಮ ಸಭೆ ನಡೆಸಲು ಪೂರ್ವಸಿದ್ಧತೆ ಮಾಡಿಕೊಳ್ಳುವುದು. |
| ದಿನಾಂಕ 16-05-2022 ರಿಂದ 30-07-2022 ರವರೆಗೆ | 'ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ' ವನ್ನು ನಡೆಸುವುದು |
| ದಿನಾಂಕ 16-05-2022 ರಿಂದ 30-07-2022 ರವರೆಗೆ | ದಿನಾಂಕವನ್ನು ನಿಗದಿಪಡಿಸಿಕೊಂಡು ಒಂದು ದಿನ ಮಕ್ಕಳ ವಿಶೇಷ ಗ್ರಾಮ ಸಭೆ ನಡೆಸುವುದು. |

1. **ಮಕ್ಕಳ ಸ್ನೇಹಿ ಗ್ರಾಮ ಪಂಚಾಯಿತಿ ಅಭಿಯಾನ ಮತ್ತು ಮಕ್ಕಳ ಗ್ರಾಮ ಸಭೆಯ ಪೂರ್ವ ಸಿದ್ಧತೆ:** ಗ್ರಾಮ ಪಂಚಾಯತಿಗಳಿಂದ ವಿವಿಧ ಭಾಗೀದಾರರ ಸಹಭಾಗಿತ್ವದಲ್ಲಿ ಪೂರ್ವ ಸಿದ್ಧತೆಗಾಗಿ ಸಭೆಯನ್ನು ನಡೆಸಿ ಮಕ್ಕಳ ಸ್ನೇಹಿ ಅಭಿಯಾನದ ಕಾರ್ಯಚಟುವಟಿಕೆಗಳ ವೇಳಾ ಪಟ್ಟಿ ಮತ್ತು ಸಾಧಿಸಬೇಕಾದ ಗುರಿಗಳ ಕುರಿತು ಕಾರ್ಯಯೋಜನೆ ದಿನಾಂಕ 15-05-2022ರೊಳಗೆ ತಯಾರಿಸಿ ಅಭಿಯಾನವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು.
   - **ಪೂರ್ವ ತಯಾರಿ:**
     - 2020 ಮತ್ತು 2021(ನಡೆಸಿದ್ದಲ್ಲಿ) ರಲ್ಲಿ ನಡೆಸಲಾದ ಎರಡು ವರ್ಷಗಳ ಮಕ್ಕಳ ಗ್ರಾಮ ಸಭೆಯ ನಡಾವಳಿಗಳನ್ನು ಪರಾಮರ್ಶಿಸಿ, ಸದರಿ ಸಭೆಯಲ್ಲಿನ ನಿರ್ಣಯಗಳ ಜಾರಿಗಾಗಿ ತೆಗೆದುಕೊಂಡ ಕ್ರಮಗಳ ಅನುಪಾಲನಾ ವರದಿಯನ್ನು ಸಿದ್ಧಪಡಿಸಿ, ಸ್ಥಳೀಯ ಸ್ವಸಹಾಯ ಸಂಘಗಳು ಮತ್ತು ಮಕ್ಕಳ ಹಕ್ಕುಗಳ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಸಂಸ್ಥೆಗಳೊಂದಿಗೆ ಮುಂಚಿತವಾಗಿ

ಹಂಚಿಕೊಂಡು ಅವರುಗಳ ಪ್ರತಿಕ್ರಿಯೆ ಮತ್ತು ಶಿಫಾರಸ್ಸುಗಳನ್ನು ಪಡೆದು ಅಂತಿಮಗೊಳಿಸುವುದು. ಸದರಿ ವರದಿಯನ್ನು 2022 ರ ಮಕ್ಕಳ ಗ್ರಾಮ ಸಭೆಯಲ್ಲಿ ಪ್ರಸ್ತುತ ಪಡಿಸುವುದು.

- ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳೊಂದಿಗೆ ಸಮಾಲೋಚಿಸಿ ಮಕ್ಕಳ ಗ್ರಾಮ ಸಭೆ ನಡೆಸಲು ದಿನಾಂಕವನ್ನು ನಿಗದಿಗೊಳಿಸುವುದು.

- **ಪೂರ್ವ ಸಿದ್ದತಾ ಸಭೆ:** "ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ" ನಡೆಸುವ ಕುರಿತು ಪೂರ್ವಸಿದ್ಧತೆಗಾಗಿ ಗ್ರಾಮ ಪಂಚಾಯತಿ ಮಟ್ಟದ, ಮಕ್ಕಳಿಗೆ ಸಂಬಂಧಿಸಿದ ಸಮಿತಿಗಳಾದ ಗ್ರಾಮ ಪಂಚಾಯತಿ ಶಿಕ್ಷಣ ಕಾರ್ಯಪಡೆ, ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ, ಬಾಲ ವಿಕಾಸ ಸಮಿತಿ, ಮಹಿಳೆಯರ ಮತ್ತು ಮಕ್ಕಳ ರಕ್ಷಣೆಯ ಕಾವಲು ಸಮಿತಿ, ಗ್ರಾಮ ಪಂಚಾಯತಿ ಗ್ರಂಥಾಲಯ, ಗ್ರಾಮ ಆರೋಗ್ಯ, ಪೌಷ್ಟಿಕತೆ ಮತ್ತು ನೈರ್ಮಲ್ಯ ಸಮಿತಿಗಳು ಸೇರಿದಂತೆ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 (ತಿದ್ದುಪಡಿ 2015)ರ ಪ್ರಕರಣ 61-Aರ ಅಡಿಯಲ್ಲಿ ಗ್ರಾಮ ಪಂಚಾಯತಿ ಮಟ್ಟದಲ್ಲಿ ರಚಿಸಲಾದ ವಿವಿಧ ಸಮಿತಿಯ ಪ್ರತಿನಿಧಿಗಳ ಮತ್ತು ವಿವಿಧ ಇಲಾಖೆ/ಇಲಾಖೇತರ ಭಾಗೀದಾರರ ಸಭೆಯನ್ನು 2022 ಮೇ 15 ರೊಳಗೆ ನಡೆಸುವುದು. ಈ ಸಭೆಯಲ್ಲಿ ಮಕ್ಕಳ ಭಾಗವಹಿಸುವಿಕೆಗೆ ಅವಕಾಶ ನೀಡಿ **16 ಮೇ ರಿಂದ 30 ಜುಲೈ 2022ರವೆಗೆ** ಗ್ರಾಮ ಪಂಚಾಯತಿಯಿಂದ **"ಮಕ್ಕಳ ಸ್ನೇಹಿ ಗ್ರಾಮ ಪಂಚಾಯಿತಿ ಅಭಿಯಾನ"** ಆಯೋಜಿಸುವ ಕುರಿತು ಚರ್ಚಿಸಿ 10 ವಾರಗಳಲ್ಲಿ ಹಮ್ಮಿಕೊಳ್ಳಬೇಕಾದ ಕಾರ್ಯಕ್ರಮಗಳು, ಮಕ್ಕಳ ಸಮಗ್ರ ಅಭಿವೃದ್ಧಿಗೆ ಸಂಬಂಧಿಸಿದಂತೆ ಸಾಧಿಸಬೇಕಾದ ಗುರಿಗಳ ಕುರಿತು ತಾತ್ಕಾಲಿಕ ದಿನಾಂಕಗಳೊಂದಿಗೆ ವಿವರವಾದ ವೇಳಾ ಪಟ್ಟಿಯನ್ನು ಸಿದ್ದ ಪಡಿಸಿಕೊಳ್ಳುವುದು ಹಾಗೂ ರೂಪಿಸಲಾದ ಕಾರ್ಯಕ್ರಮ/ಚಟುವಟಿಕೆಗಳನ್ನು ಅನುಷ್ಠಾನಗೊಳಿಸಲು ಕ್ರಮವಹಿಸುವುದು.(**ಅನುಬಂಧ-ಎ** ಮಾದರಿ ವೇಳಾಪಟ್ಟಿ ಮತ್ತು **ಅನುಬಂಧ-ಬಿ** ಸಾಧಿಸಬೇಕಾದ ಗುರಿಗಳನ್ನು ನಮೂದಿಸಲಾಗಿದೆ)
- **ಬಾಲ ಮಿತ್ರ:** ಪೂರ್ವ ಸಿದ್ಧತೆ ಸಭೆಯಲ್ಲಿ ಗ್ರಾಮ ಪಂಚಾಯತಿ ಶಿಕ್ಷಣ ಕಾರ್ಯಪಡೆಯಲ್ಲಿ ಇರುವ ಒಬ್ಬ ಸದಸ್ಯರನ್ನು 'ಪಂಚಾಯತಿ ಬಾಲ ಮಿತ್ರ' ಎಂದು ಘೋಷಿಸುವುದು ಮತ್ತು ಈ 'ಬಾಲ ಮಿತ್ರ' ಅಧಿಕಾರಿ/ಅಧಿಕಾರೇತರರಾಗಿರಬಹುದು. ಇವರು ಈ ಕೆಳಕಂಡ ಕಾರ್ಯಗಳನ್ನು ನಿರ್ವಹಿಸುವುದು.
  - ಗ್ರಾಮ/ವಾರ್ಡ್ ಹಾಗೂ ಗ್ರಾಮ ಪಂಚಾಯತಿ ಮಟ್ಟದ ಮಕ್ಕಳ ಗ್ರಾಮ ಸಬೆ ನಡೆಯಲು ಅಧಿಕಾರಿ ಮತ್ತು ಅಧಿಕಾರೇತರರು ಹಾಗೂ ಗ್ರಾಮ ಪಂಚಾಯತಿಯೊಂದಿಗೆ ಸಮನ್ವಯ ಕಾರ್ಯ ಕೈಗೊಳ್ಳುವುದು.
  - ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಮಕ್ಕಳಿಗೆ ಸುಲಭವಾಗಿ ಸಿಗುವಂತಿರಬೇಕು; ಮಕ್ಕಳ ಸಮಸ್ಯೆಗಳನ್ನು ಆಲಿಸಬೇಕು; ಮಕ್ಕಳ ಸಂರಕ್ಷಣೆಗಾಗಿ ಕಾರ್ಯನಿರ್ವಹಿಸಲಾಗುವುದು ಎಂಬ ಭರವಸೆ ಮೂಡಿಸಬೇಕು ಹಾಗೂ ಮಕ್ಕಳಿಂದ ಮಕ್ಕಳಿಗೆ ಸಂಬಂಧಪಟ್ಟ ಸಮಸ್ಯೆಗಳ ಕೋರಿಕೆ ಪತ್ರಗಳನ್ನು ಸ್ವೀಕರಿಸುವುದು.
  - ಗ್ರಾಮ/ವಾರ್ಡ್ ಹಾಗೂ ಗ್ರಾಮ ಪಂಚಾಯಿತಿ ಮಟ್ಟದ ಮಕ್ಕಳ ಗ್ರಾಮ ಸಭೆಗಳಲ್ಲಿ ಮಕ್ಕಳಿಂದ ಮತ್ತು ಹಿತೈಷಿಗಳಿಂದ ಮೂಡಿಬಂದ ಮಕ್ಕಳ ಸಮಸ್ಯೆಗಳು/ಬೇಡಿಕೆಗಳು/ಪ್ರಶ್ನೆಗಳು ಸಭೆಯ ನಿರ್ಣಯಗಳಲ್ಲಿ ಬರುವಂತೆ ನೋಡಿಕೊಳ್ಳುವುದು.

- ➢ "ಮಕ್ಕಳ ಸ್ನೇಹಿ ಗ್ರಾಮ ಪಂಚಾಯಿತಿ ಅಭಿಯಾನ" ದ ಅಂಗವಾಗಿ ಹಮ್ಮಿಕೊಳ್ಳಲಾದ ಕಾರ್ಯಕ್ರಮಗಳಲ್ಲಿ/ಚಟುವಟಿಕೆಗಳಲ್ಲಿ ಗ್ರಾಮ ಪಂಚಾಯತಿ ಮತ್ತು ವಿವಿಧ ಭಾಗೀದಾರರೊಂದಿಗೆ ಸಮನ್ವಯತೆ ಸಾಧಿಸುವುದು.
- ➢ ಮಕ್ಕಳ ಹಕ್ಕುಗಳ ಗ್ರಾಮ ಸಭೆಯಲ್ಲಿ ತೆಗೆದುಕೊಳ್ಳಲಾದ ನಿರ್ಣಯಗಳು ಸೇರಿದಂತೆ ಈ 10 ವಾರಗಳ ಅಭಿಯಾನದ ಅವಧಿಯಲ್ಲಿ ಮೂಡಿಬಂದ ಅಂಶಗಳನ್ನು ಒಳಗೊಂಡ ಕ್ರಿಯಾ ಯೋಜನೆಯನ್ನು ತಯಾರಿಸಲು ಸಹಕರಿಸುವುದು.

- **ಮಕ್ಕಳ ಸ್ಥಿತಿ:** ಪ್ರತಿ ವಾರ್ಡ್ ಮಟ್ಟದ ಮತ್ತು ಗ್ರಾಮ ಪಂಚಾಯಿತಿ ಮಟ್ಟದ ಮಕ್ಕಳ ಪರಿಸ್ಥಿತಿಯನ್ನು (2020-2021 ಮತ್ತು 2021-2022 ನೇ ಸಾಲಿನ, ಮಾರ್ಚ್ 2022 ಅಂತ್ಯದವರೆಗೆ ಇರುವಂತೆ) ವಿವರಿಸಿರುವ ಅಂಕಿಸಂಖ್ಯೆಯ ಚಾರ್ಟ್ / ಪಟ್ಟಿಯನ್ನು ಶಾಲಾ ಶಿಕ್ಷಕರು, ಅಂಗನವಾಡಿ ಕಾರ್ಯಕರ್ತೆ, ಆಶಾ ಕಾರ್ಯಕರ್ತೆಯರ ಸಮನ್ವಯತೆಯಲ್ಲಿ ಸಿದ್ಧಪಡಿಸಿ ಅದನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಫೇಸ್‌ಬುಕ್‌ನಲ್ಲಿ ಹಾಕಬೇಕು. ಅದರ ಪ್ರತಿಯನ್ನು ಸಾರ್ವಜನಿಕವಾಗಿ ಪ್ರದರ್ಶಿಸಬೇಕು ಹಾಗೂ ಕೇಳಿದವರಿಗೆ ಕೊಡುವ ಸಲುವಾಗಿ ಪ್ರತಿಗಳನ್ನು ಸಿದ್ಧಪಡಿಸಿಕೊಳ್ಳಬೇಕು. ಈ ಪಟ್ಟಿಯನ್ನು ಮೇ-15 ರೊಳಗೆ ಸಿದ್ಧಪಡಿಸಬೇಕು ಹಾಗೂ ಈ ವಿವರಗಳನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸುವುದು. ಸದರಿ ಚಾರ್ಟ್ ನ್ನು ಪಂಚತಂತ್ರ ತಂತ್ರಾಂಶದಲ್ಲಿ ಸೃಜಿಸಲಾಗುವುದು. ಈ ಪಟ್ಟಿ ಆಧರಿಸಿ ಮಕ್ಕಳ ಗ್ರಾಮಸಭೆಯಲ್ಲಿ ಚರ್ಚೆ ನಡೆಸಲು ಸಂಬಂಧಿತರೆಲ್ಲರೂ ಸಿದ್ಧರಿರಬೇಕು [**ಅನುಬಂಧ-ಸಿ** ಯಲ್ಲಿ ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿಗಳು-ಮಕ್ಕಳ ಗ್ರಾಮ ಸಭೆಯ ಮಾದರಿ ಅಂಕಿಸಂಖ್ಯೆಯ ಚಾರ್ಟ್ ನೀಡಲಾಗಿದೆ].
- "ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ" ದ ಕುರಿತು ರಾಜ್ಯ ಮಟ್ಟದಿಂದ ಯುಟ್ಯೂಬ್ ಲೈವ್/ನೇರ ಪ್ರಸಾರ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು. (ತರಬೇತಿ ದಿನಾಂಕವನ್ನು ನಂತರದಲ್ಲಿ ತಿಳಿಸಲಾಗುವುದು) ಈ ಕಾರ್ಯಕ್ರಮದಲ್ಲಿ ಎಲ್ಲಾ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಭಾಗವಹಿಸಬೇಕು. ಪ್ರತಿ ಗ್ರಾಮ ಪಂಚಾಯತಿ ಮಟ್ಟದಲ್ಲಿ 02 ಮಕ್ಕಳು ಭಾಗವಹಿಸಲು ಕ್ರಮ ಕೈಗೊಳ್ಳುವುದು ಹಾಗೂ ಮಕ್ಕಳ ಅಭಿವೃದ್ಧಿಗೆ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳಿಗೂ ಸಹ ಈ ತರಬೇತಿಯಲ್ಲಿ ಬಾಗವಹಿಸಲು ತಿಳಿಸುವುದು.

## 2. ಮಕ್ಕಳ ಸ್ನೇಹಿ ಗ್ರಾಮ ಪಂಚಾಯಿತಿ ಅಭಿಯಾನದ 10 ವಾರಗಳ ಕಾರ್ಯಕ್ರಮ

2.1."ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ" ದ ಅಂಗವಾಗಿ 10 ವಾರಗಳಲ್ಲಿ (ಪ್ರತಿವಾರ) ಈ ಕೆಳಗಿನ ಕಾರ್ಯಕ್ರಮ/ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು.

- ➢ ಮಕ್ಕಳ ಜನನ ನೊಂದಣಿ ಮತ್ತು ಜನನ ಪ್ರಮಾಣ ಪತ್ರಗಳ ವಿತರಣೆ.
- ➢ ಪೌಷ್ಟಿಕ ಆಹಾರ ಕುರಿತು ಮಾರ್ಗದರ್ಶನ ಹಾಗೂ ಜಾಗೃತಿ.
- ➢ ಮಕ್ಕಳಿಗೆ ಜುಚ್ಚುಮದ್ದು ಪ್ರಾಮುಖ್ಯತೆ.
- ➢ ಮಾನಸಿಕ ಆರೋಗ್ಯ ಸಂಬಂಧಿತ ಕಾರ್ಯಕ್ರಮಗಳು.
- ➢ ಬೇಟಿ ಬಚಾವೋ ಬೇಟಿ ಪಡಾವೋ ಯೋಜನೆಯಡಿ **ಕನ್ಯಾ ಶಿಕ್ಷಾ ಪ್ರವೇಶ್ ಉತ್ಸವ್** ಅಂಗವಾಗಿ ಈ ಕೆಳಕಂಡ ಚಟುವಟಿಕೆಗಳನ್ನು ಆಯೋಜಿಸುವುದು.
    1. ಶಾಲೆಯಿಂದ ಹೊರಗುಳಿದ 11-14 ವರ್ಷ ವಯಸ್ಸಿನ ಪ್ರಾಯಪೂರ್ವ ಬಾಲಕಿಯರ ಪಟ್ಟಿಯನ್ನು ಸಿದ್ಧಪಡಿಸಿ ಮರಳಿ ಶಾಲೆಗೆ ದಾಖಲಿಸಲು ಕ್ರಮಕೈಗೊಳ್ಳುವುದು.

2. ಶಾಲೆಯಿಂದ ಹೊರಗುಳಿದ 11-14 ವರ್ಷ ವಯಸ್ಸಿನ ಪ್ರಾಯಪೂರ್ವ ಬಾಲಕಿಯರ ಪಟ್ಟಿ ಮಾಡಿ ವಯಸ್ಸಿಗನುಗುಣವಾಗಿ ವಿಶೇಷ ತರಬೇತಿ ಮತ್ತು ಕಲಿಕೆಗೆ ಕ್ರಮವಹಿಸುವುದು.
3. ಶಾಲೆಯಿಂದ ಹೊರಗುಳಿದ 14-18 ವರ್ಷ ವಯಸ್ಸಿನ ಪ್ರಾಯಪೂರ್ವ ಬಾಲಕಿಯರನ್ನು ಕೌಶಲ್ಯಾಭಿವೃದ್ಧಿ ತರಬೇತಿ ಅಥವಾ ತೆರೆದ ಶಾಲೆಗಳಿಗೆ ದಾಖಲಿಸಲು ಕ್ರಮವಹಿಸುವುದು.
4. ಶಾಲೆಯಿಂದ ಹೊರಗುಳಿದ ಪ್ರಾಯಪೂರ್ವ ಬಾಲಕಿಯರನ್ನು ಮರಳಿ ಶಾಲೆಗೆ ಸೇರಿಸಲು ಸಮುದಾಯ/ಕುಟುಂಬದ ಸದಸ್ಯರೊಂದಿಗೆ ಸಮಾಲೋಚನೆ ನಡೆಸಿ ಚಾಲ್ತಿಯಲ್ಲಿರುವ ಯೋಜನೆಗಳಡಿ ಕ್ರಮವಹಿಸುವುದು.
5. ಶಿಕ್ಷಣ ಇಲಾಖೆಯ ಅಧಿಕಾರಿಗಳು ಶಾಲೆಯಿಂದ ಹೊರಗುಳಿದ ಬಾಲಕಿಯರು ಕಡ್ಡಾಯವಾಗಿ ಶಾಲೆಗೆ ದಾಖಲಾಗಿರುವುದನ್ನು ಖಚಿತಪಡಿಸಿಕೊಳ್ಳುವುದು.
6. ಕ್ಷೇತ್ರ ಮಟ್ಟದಲ್ಲಿ ಸ್ಥಳೀಯ ಸಂಸ್ಥೆಗಳು, ಸ್ವಯಂ ಸೇವಾ ಸಂಸ್ಥೆಗಳು, ಗ್ರಾಮ ಪಂಚಾಯಿತಿ ಶಿಕ್ಷಣ ಕಾರ್ಯಪಡೆ ಮುಂತಾದವುಗಳು ಸಮನ್ವಯದಿಂದ ಕೆಲಸ ನಿರ್ವಹಿಸಿ 11-14 ವರ್ಷದ ಬಾಲಕಿಯರನ್ನು ಪುನಃ ಶಾಲೆಗೆ ಸೇರಿಸಲು ಕ್ರಮಕೈಗೊಳ್ಳುವುದು.

**ಮಕ್ಕಳಿಗೆ ವಿಶೇಷ ಬೇಸಿಗೆ ಶಿಬಿರವನ್ನು ಆಯೋಜಿಸಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.**

- ಮಕ್ಕಳ ಕ್ರೀಡಾಕೂಟ.
- ಮಕ್ಕಳ ಸಾಂಸ್ಕೃತಿಕ ಚಟುವಟಿಕೆಗಳು.
- ಮಕ್ಕಳಿಗೆ ಕಥೆ ಹೇಳುವ ಕಾರ್ಯಕ್ರಮಗಳು.
- ಸ್ಥಳೀಯ ಸಾಂಪ್ರದಾಯಿಕ ಆಟೋಟಗಳು/ಚಟುವಟಿಕೆಗಳು.
- ಜಾನಪದ ಗೀತೆಗಳು ಮತ್ತು ರಂಗಭೂಮಿ ಕಾರ್ಯಕ್ರಮಗಳು
- ಶೈಕ್ಷಣಿಕ ಮತ್ತು ವೃತ್ತಿಪರ ಮಾರ್ಗದರ್ಶನ ಕಾರ್ಯಕ್ರಮ.
- ಚಿತ್ರಕಲೆ ಕಾರ್ಯಕ್ರಮ.

**2.2.ಜಾಗೃತಿ ಕಾರ್ಯಕ್ರಮಗಳು:** ಈ ಮೇಲೆ ವಿವರಿಸಲಾದ ಕಾರ್ಯಕ್ರಮ/ಚಟುವಟಿಕೆಗಳ ಜೊತೆಗೆ ಗ್ರಾಮ ಪಂಚಾಯತಿ ಶಿಕ್ಷಣ ಕಾರ್ಯಪಡೆಯಿಂದ ಈ ಕೆಳಕಂಡ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸುವುದು.

- ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳನ್ನು ಗುರುತಿಸಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಮಕ್ಕಳಿಗೆ ಮತ್ತು ಸಮುದಾಯಕ್ಕೆ ಮಕ್ಕಳ ಹಕ್ಕುಗಳು, ಬಾಲ್ಯ ವಿವಾಹ ನಿಷೇಧ ಮತ್ತು ಮಕ್ಕಳು ಮತ್ತು ಕಿಶೋರಾವಸ್ಥೆಯ ಕಾರ್ಮಿಕತೆ (ಬಾಲ ಕಾರ್ಮಿಕತೆ ಕಾಯ್ದೆಯ 2016ರ ತಿದ್ದುಪಡಿ) ಕುರಿತು ಉಪನ್ಯಾಸಗಳನ್ನು ನಡೆಸುವುದರ ಮೂಲಕ ಜಾಗೃತಿ ಮೂಡಿಸುವುದು.
- ಮಕ್ಕಳಿಗೆ ವೈಜ್ಞಾನಿಕ ಮನೋಭಾವನೆ ಬೆಳೆಸಲು ವಿಜ್ಞಾನ ಕುರಿತು ಹಾಗೂ ಪವಾಡ ಬಯಲು ಮುಂತಾದ ಕಾರ್ಯಕ್ರಮಗಳನ್ನು ನಡೆಸುವುದು.
- ಉಪನ್ಯಾಸ ಮತ್ತು ವಿಜ್ಞಾನ ಕಾರ್ಯಕ್ರಮಗಳನ್ನು ಹಂತ ಹಂತವಾಗಿ ವಿವಿಧ ಸ್ಥಳಗಳಲ್ಲಿ ಕೋವಿಡ್-19 ಹರಡಂತೆ ಎಲ್ಲಾ ಮುಂಜಾಗೃತಾ ಮತ್ತು ಈ ಸಂಬಂಧ ಸರ್ಕಾರದಿಂದ ಹೊರಡಿಲಾದ ಮಾರ್ಗದರ್ಶಿಗಳನ್ನು ಅನುಸರಿಸಿ ನಡೆಸುವುದು.

**2.3.** ಮಕ್ಕಳ ಸ್ನೇಹಿ ಗ್ರಾಮ ಪಂಚಾಯಿತಿ ಅಭಿಯಾನದ ಅವಧಿಯಲ್ಲಿ ಸುಸ್ಥಿರ ಅಭಿವೃದ್ಧಿ ಗುರಿ ಸಾಧನೆಗೆ ಒತ್ತು ಕೊಡುವುದು. (**ಅನುಬಂಧ - ಬಿ ರಲ್ಲಿ ವಿವರಿಸಿದಂತೆ)**

3. **ಮಕ್ಕಳ ವಿಶೇಷ ಗ್ರಾಮ ಸಭೆ:** ದಿನಾಂಕ **16 ಮೇ ರಿಂದ 30 ಜುಲೈ 2022ರೊಳಗೆ ಮಕ್ಕಳ ವಿಶೇಷ ಗ್ರಾಮ ಸಭೆಯನ್ನು** ಆಯಾ ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿಗಳಿಂದ ನಿಗದಿಪಡಿಸಲಾದ ದಿನಾಂಕದಂದು ಅಗತ್ಯ ಪೂರ್ವ ತಯಾರಿಯೊಂದಿಗೆ ಗ್ರಾಮ ಪಂಚಾಯತಿಗಳಿಂದ ನಡೆಸುವುದು. ಸ್ಥಳೀಯವಾಗಿ ಕೋವಿಡ್-19ರ ಪರಿಸ್ಥಿತಿಯನ್ನು ಅನುಸರಿಸಿ ಕೆಲವು ಬದಲಾವಣೆ ಹಾಗೂ ಸೇರ್ಪಡೆಗಳೊಂದಿಗೆ ಮುಂಜಾಗ್ರತ ಕ್ರಮಗಳನ್ನು ತೆಗೆದುಕೊಳ್ಳುವುದು.

**3.1.** ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹ ಅಧಿಕಾರಿಗಳೊಂದಿಗೆ ಸಮಾಲೋಚಿಸಿ ಮಕ್ಕಳ ಗ್ರಾಮ ಸಭೆಗೆ ದಿನಾಂಕವನ್ನು ನಿಗದಿಪಡಿಸುವುದು.

**3.2. ಗ್ರಾಮ ಪಂಚಾಯತಿ ಮಕ್ಕಳ ಹಕ್ಕುಗಳ ರಕ್ಷಣೆ ಫೇಸ್ ಬುಕ್ ಪೇಜ್:** ಪ್ರತಿ ಗ್ರಾಮ ಪಂಚಾಯಿತಿಯಿಂದ ಮಕ್ಕಳ ಹಕ್ಕುಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ಗ್ರಾಮ ಪಂಚಾಯತ್ ಫೇಸ್ ಬುಕ್ ಪೇಜ್ ರಚಿಸುವುದು. ಈ ಫೇಸ್ ಬುಕ್ ಪೇಜ್‌ಗೆ ತಮ್ಮ ಗ್ರಾಮ ಪಂಚಾಯಿತಿ ಹೆಸರಿನೊಂದಿಗೆ ಮಕ್ಕಳ ಹಕ್ಕುಗಳ ರಕ್ಷಣೆ (ಉದಾ: --ಗ್ರಾಮ ಪಂಚಾಯಿತಿ ಮಕ್ಕಳ ಹಕ್ಕುಗಳ ರಕ್ಷಣೆ, ಜಿಲ್ಲೆ ಮತ್ತು ತಾಲ್ಲೂಕಿನ ಹೆಸರು.) ಎಂಬ ಹೆಸರಿನ ಫೇಸ್ ಬುಕ್ ಪೇಜ್‌ನ್ನು ಆಯಾ ಶಾಲಾ ಶಿಕ್ಷಕರು, ಸ್ಥಳೀಯ ಸ್ವಯಂಸೇವಾ ಸಂಘಟನೆಗಳ ಮೂಲಕ ಮಕ್ಕಳಿಗೆ ತಿಳಿಯಪಡಿಸಿ, ಮಕ್ಕಳ ಶಿಕ್ಷಣ/ಶಾಲೆ, ಆರೋಗ್ಯ ಸೇವೆ, ರಕ್ಷಣೆ ವ್ಯವಸ್ಥೆ, ವಸತಿ ನಿಲಯಗಳು, ಆಹಾರ ಮತ್ತು ಪೌಷ್ಟಿಕತೆ, ವಿಪತ್ತು ನಿರ್ವಹಣೆ, ನೀರು/ನೈರ್ಮಲ್ಯ/ಶುಚಿತ್ವ, ರಸ್ತೆ/ಸಾರ್ವಜನಿಕ ಕಟ್ಟಡ, ಶಾಲೆ/ಅಂಗನವಾಡಿ,ವಸತಿ ಸೌಲಭ್ಯ, ಮಾನವ ಸಂಪನ್ಮೂಲ ಮುಂತಾದ ಕ್ಷೇತ್ರ/ವಿಷಯಗಳಿಗೆ ಸಂಬಂಧಿಸಿದ ಅವರ ಸಮಸ್ಯೆಗಳು/ಬೇಡಿಕೆಗಳು/ಪ್ರಶ್ನೆಗಳನ್ನು ಫೇಸ್ ಬುಕ್ ಪೇಜ್‌ನಲ್ಲಿ ದಾಖಲಿಸಲು ಸಹಾಯ ಮಾಡುವುದು. ಗ್ರಾಮ ಪಂಚಾಯಿತಿಯಿಂದ ಈ ಫೇಸ್ ಬುಕ್ ಪೇಜಿನಲ್ಲಿ ಮಕ್ಕಳಿಂದ ಬಂದ ಸಮಸ್ಯೆಗಳ/ಬೇಡಿಕೆಗಳ/ಪ್ರಶ್ನೆಗಳ ಪಟ್ಟಿಯನ್ನು **ನಮೂನೆ-1ರಲ್ಲಿ** ತಯಾರಿಸಿ ಮಕ್ಕಳ ಗ್ರಾಮ ಸಭೆಯಲ್ಲಿ ಮಂಡಿಸುವುದು. ಫೇಸ್ ಬುಕ್ ಪೇಜ್‌ನಲ್ಲಿ ಮಕ್ಕಳಿಗೆ ಸಂಬಂಧಿಸಿದ ವಿಷಯಗಳು ಹೊರತು ಪಡಿಸಿ ಬೇರೆ ಅಸಮಂಜಸ ವಿಷಯಗಳು ಬಂದಲ್ಲಿ ಅವುಗಳನ್ನು ಪರಿಗಣಿಸುವ ಕುರಿತು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಸೂಕ್ತ ನಿರ್ಣಯ ತೆಗೆದುಕೊಳ್ಳುವುದು ಅಥವಾ ಫೇಸ್ ಬುಕ್ ಪೇಜಿನಿಂದ ತೆಗೆದು ಹಾಕಬಹುದು. ಮಕ್ಕಳ ಫೋಟೋಗಳನ್ನು ಅಪ್‌ಲೋಡ್ ಮಾಡುವಾಗ ವೈಯಕ್ತಿಕತೆಗೆ ಧಕ್ಕೆ ಬಾರದಂತೆ ಖಾಸಗಿತನವನ್ನು ಕಾಪಾಡುವುದು. (ಈ ಹಿಂದೆ ಫೇಸ್ ಬುಕ್ ಪೇಜ್ ಸೃಜಿಸಿದಲ್ಲಿ ಈ ಕುರಿತು ಪ್ರಚಾರ ಪಡಿಸಿ ಸದರಿ ಫೇಸ್ ಬುಕ್ ಪೇಜ್ ನ್ನು ಬಳಸುವುದು)

**3.3. ಮಕ್ಕಳ ಸಮಸ್ಯೆಗಳ/ಬೇಡಿಕೆಗಳ/ಪ್ರಶ್ನೆಗಳ 'ಮಕ್ಕಳ ಧನಿ' ಪೆಟ್ಟಿಗೆ**: ಮಕ್ಕಳ ಗ್ರಾಮ ಸಭೆಯ ಮುಂಚಿತವಾಗಿ

- ಮಕ್ಕಳು ಮತ್ತು ಮಕ್ಕಳ ಪರವಾಗಿ ಆಸಕ್ತರು/ಹಿತೈಷಿಗಳು ಮಕ್ಕಳ ಸಮಸ್ಯೆ/ಬೇಡಿಕೆಗಳ/ಪ್ರಶ್ನೆಗಳನ್ನು ಬರೆದು ಹಾಕಲು ಅನುಕೂಲವಾಗುವಂತೆ 'ಮಕ್ಕಳ ಧನಿ' ಪೆಟ್ಟಿಗೆಯನ್ನು ಆಕರ್ಷಣೀಯವಾಗಿ ಇರುವಂತೆ ತಯಾರಿಸುವುದು. ಈ 'ಮಕ್ಕಳ ಧನಿ' ಪೆಟ್ಟಿಗೆಯ ಮೇಲೆ **ಮಕ್ಕಳ ಸಹಾಯವಾಣಿ ಸಂಖ್ಯೆ 1098** ಬರೆಯುವುದು ಹಾಗೂ ಪೆಟ್ಟಿಗೆಯ ಉದ್ದೇಶ ಮತ್ತು ಕೋರಿಕೆ ಪತ್ರದ ವಿವರವಿರುವ ಪೋಸ್ಟರ್‌ನ್ನು ಬರೆದು ಅಂಟಿಸುವುದು. **(ಅನುಬಂಧ-ಡಿ)**
- 'ಮಕ್ಕಳ ಧನಿ' ಪೆಟ್ಟಿಗೆಯನ್ನು ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿನ ಪ್ರತೀ ಗ್ರಾಮ/ವಾರ್ಡ್ ನಲ್ಲಿ ಹೆಚ್ಚಿನ ಮಕ್ಕಳಿಗೆ ಅನುಕೂಲವಾಗುವಂತೆ ಆಯಾ ಗ್ರಾಮಗಳಲ್ಲಿನ

ಹೆಚ್ಚಿನ ಜನರು ಓಡಾಡುವ / ಸೇರುವ / ಜನ ಸಂದಣಿ ಇರುವ ಸ್ಥಳಗಳಾದ ಶಾಲೆ, ವಸತಿ ನಿಲಯ, ಮಕ್ಕಳ ಪಾಲನೆ ಕೇಂದ್ರ, ಅಂಗನವಾಡಿ ಕೇಂದ್ರ, ನ್ಯಾಯಬೆಲೆ ಅಂಗಡಿ, ಹಾಲು ಉತ್ಪಾದಕರ ಸಹಕಾರ ಸಂಘ, ಗ್ರಾಮ ಪಂಚಾಯತಿ ಕಚೇರಿ ಇತ್ಯಾದಿ ಸಾರ್ವಜನಿಕ ಕಚೇರಿ/ಕೇಂದ್ರಗಳಲ್ಲಿ ಶಾಲಾ ಮುಖ್ಯೋಪಾಧ್ಯಾಯರ ಮುಂದಾಳತ್ವದಲ್ಲಿ ಸ್ಥಳೀಯ ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು, ಸ್ಥಳೀಯ ಪೊಲೀಸ್ ಪ್ರತಿನಿಧಿ, ಸ್ಥಳೀಯ ಸ್ವಸಹಾಯ ಸಂಘ, ಸ್ವಯಂಸೇವಾ ಸಂಘಟನೆಗಳ ಸಮನ್ವಯತೆಯೊಂದಿಗೆ ಇಡುವುದು.

- ಈ ಸುತ್ತೋಲೆಯೊಂದಿಗೆ ಲಗತ್ತಿಸಲಾದ ಪೋಸ್ಟರ್‌ಗಳ ವಿನ್ಯಾಸವನ್ನು ಮುದ್ರಿಸಿ 'ಮಕ್ಕಳ ಧನಿ' ಪೆಟ್ಟಿಗೆ ಇಡುವ ಸ್ಥಳದಲ್ಲಿ ಪ್ರದರ್ಶಿಸುವುದು. (**ಅನುಬಂಧ-ಡಿ**)
- ಮಕ್ಕಳಿಂದ ಮತ್ತು ಮಕ್ಕಳ ಪರವಾಗಿ 'ಮಕ್ಕಳ ಧನಿ' ಪೆಟ್ಟಿಗೆಯಲ್ಲಿ ಬರೆದು ಹಾಕಲಾದ ಸಮಸ್ಯೆಗಳು/ಬೇಡಿಕೆಗಳು/ಪ್ರಶ್ನೆಗಳನ್ನು ಮುಖ್ಯೋಪಾಧ್ಯಾಯರ ಮುಂದಾಳತ್ವದಲ್ಲಿ ಅಂಗನವಾಡಿ ಕಾರ್ಯಕರ್ತೆ, ಆಶಾ ಕಾರ್ಯಕರ್ತೆ, ಸ್ಥಳೀಯ ಪೊಲೀಸ್ ಪ್ರತಿನಿಧಿ ಮತ್ತು ಸ್ಥಳೀಯ ಸ್ವಯಂಸೇವಾ ಸಂಘಟನೆಗಳ ಪ್ರತಿನಿಧಿಗಳ ಸಮ್ಮುಖದಲ್ಲಿ ತೆಗೆದು ಸಂಗ್ರಹಿಸಿ ಪಟ್ಟಿ ಮಾಡಿ ನಮೂನೆ-1ರಲ್ಲಿ ಗ್ರಾಮ ಪಂಚಾಯತಿ ಮಟ್ಟದಲ್ಲಿ ನಡೆಯುವ ಮಕ್ಕಳ ಗ್ರಾಮ ಸಭೆಯ 03 ದಿನಗಳ ಮುಂಚಿತವಾಗಿ ಸಿದ್ಧಪಡಿಸಿ ಮಕ್ಕಳ ಗ್ರಾಮ ಸಭೆಯಲ್ಲಿ ಮಂಡಿಸುವುದು.

### 3.4 ಮಕ್ಕಳ ಕೋರಿಕೆ ಪತ್ರ:

- ಅನುಬಂಧ-ಇ ರಲ್ಲಿ ತಿಳಿಸಲಾದ ಎ-3 ಅಳತೆಯ ಕೋರಿಕೆ ಪತ್ರವನ್ನು ಮುದ್ರಿಸಿ ಹೆಚ್ಚಿನ ಜನಸಂದಣಿ ಇರುವ ಸಾರ್ವಜನಿಕ ಸ್ಥಳಗಳಲ್ಲಿ, ಶಾಲೆಗಳಲ್ಲಿ, ವಸತಿ ನಿಲಯಗಳಲ್ಲಿ, ಅಂಗನವಾಡಿ ಕೇಂದ್ರಗಳಲ್ಲಿ, ಬಸ್ ನಿಲ್ದಾಣಗಳಲ್ಲಿ, ಗ್ರಾಮ ಪಂಚಾಯತಿ ಗ್ರಂಥಾಲಯಗಳಲ್ಲಿ, ಗ್ರಾಮ ಪಂಚಾಯತಿ ಕಾರ್ಯಾಲಯಗಳಲ್ಲಿ ಮತ್ತು ಮಕ್ಕಳ ಧನಿ ಪೆಟ್ಟಿಗೆ ಇಡುವ ಸ್ಥಳದಲ್ಲಿ ಅಂಟಿಸುವುದು.
- **ಮಕ್ಕಳ ಕೋರಿಕೆ ಪತ್ರಗಳನ್ನು ಸಾಮಾಜಿಕ ಜಾಲ ತಾಣ, ವಾಟ್ಸ್‌ಪ್, ಇತ್ಯಾದಿ ಮೂಲಕ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಹೆಚ್ಚಿನ ಸಂಖ್ಯೆಯಲ್ಲಿ ಸಮುದಾಯಕ್ಕೆ ತಲುಪುವಂತೆ ಹಾಗೂ ಮುದ್ರಿಸಲಾದ ಕೋರಿಕೆ ಪತ್ರಗಳು ಸಾರ್ವಜನಿಕ ಸ್ಥಳಗಳಲ್ಲಿ ಸಮುದಾಯಕ್ಕೆ ಲಭ್ಯವಿರುವಂತೆ ವ್ಯವಸ್ಥೆಮಾಡುವುದು.**
- ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳ ಕೋರಿಕೆ ಪತ್ರಗಳನ್ನು ಗ್ರಾಮ ಪಂಚಾಯತಿಯಿಂದ ಮುದ್ರಿಸುವುದು ಹಾಗೂ ಆಯಾ ಸ್ಥಳೀಯ ಶಾಲಾ ಶಿಕ್ಷಕರು ಮತ್ತು ಅಂಗನವಾಡಿ ಕಾರ್ಯಕರ್ತೆ, ಆಶಾ ಕಾರ್ಯಕರ್ತೆ, ಆರೋಗ್ಯ ಕಾರ್ಯಕರ್ತೆಯರು ಮತ್ತು ಬಾಲಮಿತ್ರರ ಹತ್ತಿರ ಲಭ್ಯವಿರುವಂತೆ ನೋಡಿಕೊಳ್ಳುವುದು.
- ಮಕ್ಕಳು ಮತ್ತು ಮಕ್ಕಳ ಪರ ವ್ಯಕ್ತಿಗಳು/ಹಿರಿಯರು ಮಕ್ಕಳಿಗೆ ಸಂಬಂಧಿಸಿದ ಸಮಸ್ಯೆ/ಬೇಡಿಕೆ/ಪ್ರಶ್ನೆಯನ್ನು ಕೋರಿಕೆ ಪತ್ರದಲ್ಲಿ ಬರೆದು ಮಕ್ಕಳ 'ಬಾಲ ಮಿತ್ರ' , ಅಂಗನವಾಡಿ ಕಾರ್ಯಕರ್ತೆ, ಆಶಾ ಕಾರ್ಯಕರ್ತೆ ಶಿಕ್ಷಕ/ಶಿಕ್ಷಕಿಯರಿಗೆ ನೇರವಾಗಿ ಸಲ್ಲಿಸಲು ಕೂಡ ಅವಕಾಶವನ್ನು ಮಾಡುವುದು.

### 3.5. ಗ್ರಾಮ/ವಾರ್ಡ್ ಮಟ್ಟದ ಮಕ್ಕಳ ಗ್ರಾಮ ಸಭೆ:

- ಗ್ರಾಮ ಪಂಚಾಯತಿ ಮಟ್ಟದಲ್ಲಿ ನಡೆಯುವ ಮಕ್ಕಳ ಗ್ರಾಮ ಸಭೆಯ ಮೊದಲು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಶಾಲೆಗಳ ಮುಖ್ಯೋಪಾಧ್ಯಾಯರುಗಳ ಮುಖಾಂತರ ಒಬ್ಬ ಶಿಕ್ಷಕ/ಶಿಕ್ಷಕಿಯನ್ನು ಸಮನ್ವಯಾಧಿಕಾರಿಯನ್ನಾಗಿ ನೇಮಿಸುವುದು. ಈ ಸಮನ್ವಯ

ಅಧಿಕಾರಿಯು ಕೋವಿಡ್-19 ಹರಡದಂತೆ ಎಲ್ಲಾ ಮುಂಜಾಗ್ರತ ಕ್ರಮಗಳನ್ನು (ಕಡ್ಡಾಯವಾಗಿ ಮಾಸ್ಕ್ ಧರಿಸುವುದು, ಸಾಮಾಜಿಕ ಅಂತರ ಪಾಲಿಸುವುದು, ಸ್ಯಾನಿಟೈಜರ್ ಬಳಸುವುದು) ಅನುಸರಿಸಿ ಗ್ರಾಮ/ವಾರ್ಡ್ ಹಂತದಲ್ಲಿ ಮಕ್ಕಳ ಜೊತೆ ಪೂರ್ವಭಾವಿ ಮಕ್ಕಳ ಹಕ್ಕುಗಳ ಗ್ರಾಮ/ವಾರ್ಡ್ ಸಭೆಯನ್ನು ಸ್ಥಳೀಯ ಸ್ವಸಹಾಯ ಸಂಘದ (SHG) 02 ಪ್ರತಿನಿಧಿಗಳ ಸಹಾಯದೊಂದಿಗೆ ನಡೆಸುವುದು.

- ಮಕ್ಕಳ ಭಾಗವಹಿಸುವಿಕೆಗೆ ಸಂಬಂಧಿಸಿದಂತೆ ಶಾಲಾ/ಗ್ರಾಮ/ವಾರ್ಡ್ ನಲ್ಲಿನ ವಿದಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ಸಮಾನ ಅವಕಾಶ, ವಿಶೇಷವಾಗಿ ಶಾಲೆಯಿಂದ ಹೊರಗುಳಿದ (ಅನುಸೂಚಿತ ಜಾತಿ, ಅನುಸೂಚಿತ ಪಂಗಡ, ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು), ವಿಕಲಚೇತನರು ಹಾಗೂ ಹೆಣ್ಣುಮಕ್ಕಳು (18 ವರ್ಷ ಪೂರ್ಣಗೊಳಿಸದ) ಭಾಗವಹಿಸಿ ಚರ್ಚಿಸಲು ಅವಕಾಶ ನೀಡಬೇಕು.
- ಗ್ರಾಮ/ವಾರ್ಡ್ ಮಟ್ಟದ ಸಭೆಯನ್ನು ವಿವಿಧ ಗುರಿ ಗುಂಪಿನ ಮಕ್ಕಳಿಗೆ ಅನುಕೂಲವಾಗುವ ದಿನ ಮತ್ತು ಸಮಯಕ್ಕೆ ನಡೆಸುವುದು.
- ಸದರಿ ವಾರ್ಡ್/ಗ್ರಾಮ ಮಟ್ಟದ ಮಕ್ಕಳ ಹಕ್ಕುಗಳ ಸಭೆಯಲ್ಲಿ,
  - ➢ ಮಕ್ಕಳ ಹಕ್ಕುಗಳ ಬಗ್ಗೆ, ಮಕ್ಕಳಿಗಾಗಿ ಸರ್ಕಾರದಿಂದ ಇರುವ ವಿವಿಧ ಯೋಜನೆಗಳು, ಸೌಲಭ್ಯಗಳು ಕುರಿತು ಸಂಕ್ಷಿಪ್ತವಾಗಿ ತಿಳಿಸುವುದು.
  - ➢ ಮಕ್ಕಳ ಗ್ರಾಮ ಸಭೆಯ ಉದ್ದೇಶ, ದಿನಾಂಕ ಮತ್ತು ಸ್ಥಳ ಹಾಗೂ ಅವರ ಭಾಗವಹಿಸುವಿಕೆ ಮಹತ್ವ ಕುರಿತು ಮಕ್ಕಳಿಗೆ ತಿಳಿಸುವುದು.
  - ➢ ಗ್ರಾಮ/ವಾರ್ಡ್ ಸಭೆಯಲ್ಲಿ ಮಕ್ಕಳಿಗೆ, ಮಕ್ಕಳ ಶಿಕ್ಷಣ/ಶಾಲೆ, ಆರೋಗ್ಯ ಸೇವೆ, ರಕ್ಷಣೆ ವ್ಯವಸ್ಥೆ, ವಸತಿ ನಿಲಯಗಳು,ಆಹಾರ ಮತ್ತು ಪೌಷ್ಟಿಕತೆ, ವಿಪತ್ತು ನಿರ್ವಹಣೆ, ನೀರು/ನೈರ್ಮಲ್ಯ/ಶುಚಿತ್ವ, ರಸ್ತೆ/ಸಾರ್ವಜನಿಕ ಕಟ್ಟಡ, ಶಾಲೆ/ಅಂಗನವಾಡಿ,ವಸತಿ ಸೌಲಭ್ಯ, ಮಾನವ ಸಂಪನ್ಮೂಲ ಮುಂತಾದ ಕ್ಷೇತ್ರ/ವಿಷಯಗಳಿಗೆ ಸಂಬಂಧಿಸಿದ ತಮ್ಮ ಸಮಸ್ಯೆಗಳು/ಬೇಡಿಕೆಗಳು/ಪ್ರಶ್ನೆಗಳ ಕುರಿತು ಮಾತನಾಡಲು ಮುಕ್ತ ಅವಕಾಶ ನೀಡುವುದು ಹಾಗೂ ಇವುಗಳ ವ್ಯವಸ್ಥೆ/ಸೌಲಭ್ಯಗಳಿಗೆ ಸಂಬಂಧಿಸಿದಂತೆ ಸಮಸ್ಯೆಗಳ/ಬೇಡಿಕೆಗಳ/ಪ್ರಶ್ನೆಗಳ ಕುರಿತು ಚರ್ಚಿಸಿ ಅಥವಾ ಕೋರಿಕೆ ಪತ್ರದಲ್ಲಿ ಬರೆದು ಕೊಡಲು ತಿಳಿಸುವುದು. ಸದರಿ ಚರ್ಚೆಯಲ್ಲಿ ಮಕ್ಕಳಿಂದ ಮೂಡಿಬಂದ ಅಥವಾ ಕೋರಿಕೆ ಪತ್ರದ ಮೂಲಕ ಬಂದ ಸಮಸ್ಯೆಗಳು/ಬೇಡಿಕೆಗಳ ಪಟ್ಟಿಯನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಿದ ನಮೂನೆ-1ರಲ್ಲಿ ತಯಾರಿಸುವುದು.

- ಗ್ರಾಮ/ವಾರ್ಡ್ ಮಟ್ಟದಿಂದ, ಗ್ರಾಮ ಪಂಚಾಯತಿ ಮಟ್ಟದ ಮಕ್ಕಳ ಗ್ರಾಮ ಸಭೆಯಲ್ಲಿ ಎಲ್ಲಾ ಮಕ್ಕಳನ್ನು ಪ್ರತಿನಿಧಿಸಲು ಶಾಲೆಗೆ ಹಾಜರಾಗುತ್ತಿರುವ, ಶಾಲೆಯಿಂದ ಹೊರಗುಳಿದ, ವಿಶೇಷ/ವಿಕಲಚೇತನ, ಅಲೆಮಾರಿ ಕುಟುಂಬಗಳ ಮಕ್ಕಳು ಸೇರಿದಂತೆ (ಅನುಸೂಚಿತ ಜಾತಿ, ಅನುಸೂಚಿತ ಪಂಗಡ, ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು) ಪ್ರತಿನಿಧಿಸುವ ಹಾಗೆ ಇಬ್ಬರು ಬಾಲಕರು ಮತ್ತು ಇಬ್ಬರು ಬಾಲಕಿಯರನ್ನು ಮಕ್ಕಳಿಂದಲೇ ಗುರುತಿಸುವುದು. ಗುರುತಿಸಲಾದ ಈ ಬಾಲಕ ಮತ್ತು ಬಾಲಕಿಯರೊಂದಿಗೆ ಸಂಬಂಧಿಸಿದ ಶಿಕ್ಷಕರು ಗ್ರಾಮ ಪಂಚಾಯತಿ ಮಟ್ಟದಲ್ಲಿ ನಿಗದಿತ ದಿನಾಂಕದಂದು ನಡೆಯುವ ಮಕ್ಕಳ ಗ್ರಾಮ ಸಭೆಗೆ ಹಾಜರಾಗುವುದು ಮತ್ತು ಗ್ರಾಮ/ವಾರ್ಡ್ ಮಟ್ಟದಲ್ಲಿ ಮಕ್ಕಳಿಂದ ಮೂಡಿಬಂದ ಸಮಸ್ಯೆಗಳ/ಬೇಡಿಕೆಗಳ ಪಟ್ಟಿಯನ್ನು ಮಂಡಿಸುವುದು.
- ಈ ಸಭೆಯಲ್ಲಿ ಭಾಗವಹಿಸಿದ ಎಲ್ಲಾ ಮಕ್ಕಳ ಮತ್ತು ಶಿಕ್ಷಕ/ಶಿಕ್ಷಕಿಯರ ಸಹಿಗಳನ್ನು ಸಂಬಂಧಿಸಿದ ನಡಾವಳಿ/ಹಾಜರಾತಿ ವಹಿಯಲ್ಲಿ ಪಡೆಯುವುದು.

- ಗ್ರಾಮ/ವಾರ್ಡ್ ಮಟ್ಟದ ಸಭೆಗಳು ಗ್ರಾಮ ಪಂಚಾಯತಿ ಮಟ್ಟದಲ್ಲಿ ನಡೆಯುವ ಮಕ್ಕಳ ಗ್ರಾಮ ಸಭೆಯ ಮುಂಚಿತವಾಗಿ ಪೂರ್ಣಗೊಂಡಿರಬೇಕು ಹಾಗೂ ಗ್ರಾಮ ಪಂಚಾಯತಿಯಿಂದ, ಫೇಸ್ ಬುಕ್ ಪೇಜಿನಲ್ಲಿ, ಮಕ್ಕಳ ಧನಿ ಪೆಟ್ಟಿಗೆಯಲ್ಲಿ ಮಕ್ಕಳಿಂದ ಬಂದ ಸಮಸ್ಯೆಗಳು/ಬೇಡಿಕೆಗಳು/ಪ್ರಶ್ನೆಗಳ ಪಟ್ಟಿಗಳನ್ನು ನಮೂನೆ-1ರಲ್ಲಿ ಕ್ರೋಢೀಕರಿಸಿ ಮಕ್ಕಳ ಗ್ರಾಮ ಸಭೆಯ 03 ದಿನಗಳ ಮುಂಚಿತವಾಗಿ ತಯಾರಿಸುವುದು ಮತ್ತು ಚರ್ಚಿಸಿ ಅಂತಿಮಗೊಳಿಸಲು ಗ್ರಾಮ ಪಂಚಾಯತಿ ಮಟ್ಟದ ಮಕ್ಕಳ ಗ್ರಾಮ ಸಭೆಯಲ್ಲಿ ಮಂಡಿಸುವುದು.
- **ವಿಶೇಷ ಸೂಚನೆ: ಪೂರ್ವ ತಯಾರಿ ಸಭೆಯಲ್ಲಿ ಈ ಕುರಿತು ಚರ್ಚಿಸಿ ಗ್ರಾಮ ಪಂಚಾಯಿತಿ ಮಟ್ಟದ ಮಕ್ಕಳ ಗ್ರಾಮ ಸಭೆಯಲ್ಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಮಕ್ಕಳನ್ನು ಸೇರಿಸಲು ಸಾಧ್ಯ/ಅಸಾಧ್ಯತೆಗಳನ್ನು ಗಮನಕ್ಕೆ ತೆಗೆದುಕೊಂಡು ಗ್ರಾಮ/ವಾರ್ಡ್ ಮಟ್ಟದ ಮಕ್ಕಳ ಸಭೆ ನಡೆಸುವ ಕುರಿತು ಸ್ಥಳೀಯವಾಗಿ ನಿರ್ಣಯ ತೆಗೆದುಕೊಳ್ಳುವುದು.**

**3.6. ಗ್ರಾಮ ಪಂಚಾಯತಿ ಮಟ್ಟದಲ್ಲಿನ ಮಕ್ಕಳ ಗ್ರಾಮ ಸಭೆ:**

- ಗ್ರಾಮ ಪಂಚಾಯತಿ ಮಟ್ಟದ ಮಕ್ಕಳ ಗ್ರಾಮ ಸಭೆಯನ್ನು ಆಯಾ ತಾಲ್ಲೂಕಿನ ಕಾರ್ಯನಿರ್ವಾಹಕ ಅಧಿಕಾರಿಗಳು ಗ್ರಾಮ ಪಂಚಾಯತಿಗಳೊಂದಿಗೆ ಸಮಾಲೋಚಿಸಿ ನಿಗದಿಪಡಿಸಲಾದ ದಿನಾಂಕದಂದು ನಡೆಸುವುದು.
- ಮಕ್ಕಳ ಗ್ರಾಮ ಸಭೆಯ ಕುರಿತು ಗ್ರಾಮ ಪಂಚಾಯತಿ ಆಡಳಿತ/ಉಸ್ತುವಾರಿ ಅಧಿಕಾರಿಗಳಿಗೆ, ಗ್ರಾಮ ಪಂಚಾಯತಿ ವ್ಯಾಪ್ತಿಯ ವಿವಿಧ ಭಾಗೀದಾರರಾದ ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ತಾಲೂಕು ಮತ್ತು ಜಿಲ್ಲಾ ಮಟ್ಟದ ಮಕ್ಕಳ ಸಂರಕ್ಷಣಾಧಿಕಾರಿ,ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಎಸ್.ಡಿ.ಎಮ್.ಸಿ.ಯವರಿಗೆ, ಆರೋಗ್ಯ ಇಲಾಖೆ, ಪೋಲಿಸ್ ಅಧಿಕಾರಿಗಳು, ಸ್ಥಳೀಯ ಸ್ವಸಹಾಯ ಸಂಘದ ಪ್ರತಿನಿಧಿಗಳು, ಯುವಕ/ಯುವತಿ ಮಂಡಳಿಗಳು,ಸ್ವಯಂ ಸೇವಾ ಸಂಸ್ಥೆಗಳಿಗೆ ಮುಂಚಿತವಾಗಿ ತಿಳಿಸುವುದು ಮತ್ತು ಈ ಎಲ್ಲಾ ಅಧಿಕಾರಿಗಳು ಮತ್ತು ಅಧಿಕಾರೇತರರು ಭಾಗವಹಿಸುವಂತೆ ನೋಡಿಕೊಳ್ಳುವುದು.
- ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಮತ್ತು ಜಿಲ್ಲಾ/ತಾಲೂಕು ಕಾನೂನು ಸೇವಾ ಪ್ರಾಧಿಕಾರಕ್ಕೆ ವಿಶೇಷ ಆಹ್ವಾನ ನೀಡುವುದು.
- ಶಾಲೆಗಳಲ್ಲಿರುವ ಮಕ್ಕಳ ಹಕ್ಕುಗಳ ಕ್ಲಬ್ ಪ್ರತಿನಿಧಿ, ಮಕ್ಕಳ ಸುರಕ್ಷತಾ ಸಮಿತಿಗಳ ಪ್ರತಿನಿಧಿ,ಶಾಲಾ ಕ್ಯಾಬಿನೆಟ್‌ನ ಮುಖ್ಯಮಂತ್ರಿ, ಮಹಿಳಾ ಮತ್ತು ಮಕ್ಕಳ ಸಂರಕ್ಷಣೆ ಕಾವಲು ಸಮಿತಿಯ ಪ್ರತಿನಿಧಿ, ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಪ್ರತಿನಿಧಿ,ಆಸಕ್ತ ಪೋಷಕರು ಇವರುಗಳಿಗೆ ಶಾಲಾ ಮುಖ್ಯೋಪಾಧ್ಯಾಯರ ಮೂಲಕ ತಿಳಿಸಿ ಮಕ್ಕಳ ಹಕ್ಕುಗಳ ಗ್ರಾಮ ಸಭೆಗೆ ಹಾಜರಾಗುವಂತೆ ನೋಡಿಕೊಳ್ಳುವುದು.
- ಕೋವಿಡ್-19 ಹರಡಂತೆ ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಸಭೆಯ ಸಂದರ್ಭದಲ್ಲಿ ಕಡ್ಡಾಯವಾಗಿ ಪಾಲಿಸುವುದು.ಮಕ್ಕಳ ಗ್ರಾಮ ಸಭೆಗಳನ್ನು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಹೆಚ್ಚು ದೊಡ್ಡದಾದ ಆವರಣ, ಉತ್ತಮ ಗಾಳಿ, ಬೆಳಕು ಇರುವ ಪ್ರೌಢ ಶಾಲೆಗಳಲ್ಲಿ ಅಥವಾ ಸೂಕ್ತವಾದ ಸ್ಥಳದಲ್ಲಿ ನಡೆಸುವುದು.
- ಮಕ್ಕಳ ಗ್ರಾಮ ಸಭೆಯಲ್ಲಿ ಸಂಬಂಧಿಸಿದ ಅಧಿಕಾರಿಗಳು, ಅಧಿಕಾರೇತರರು (ಸಂಘಗಳ/ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳು) ಹಾಗೂ ಮಕ್ಕಳು(ಗ್ರಾಮ/ವಾರ್ಡ್ ಸಭೆಯಲ್ಲಿ ಗುರುತಿಸಲಾದ ಮಕ್ಕಳ ಪ್ರತಿನಿಧಿಗಳು) ಸೇರಿದಂತೆ ಸಭೆಯಲ್ಲಿ ಸೇರಬೇಕಾದ ಸಂಖ್ಯೆಯನ್ನು ಮೊದಲೇ ನಿಗದಿಗೊಳಿಸುವುದು.
- ಸಭೆ ನಡೆಸಲಾಗುವ ಸ್ಥಳದಲ್ಲಿ ಕೈತೊಳೆಯಲು ಸ್ಥಳ, ಸಾಬೂನು ಮತ್ತು ನೀರಿನ ವ್ಯವಸ್ಥೆ ಮಾಡುವುದು, ಪ್ರತಿಯೊಬ್ಬರೂ ಕಡ್ಡಾಯವಾಗಿ ಮಾಸ್ಕ್ ಧರಿಸುವುದು ಮತ್ತು ಸಾಮಾಜಿಕ ಅಂತರ ಕಾಪಾಡುವುದು. ಈ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಸಭೆಯಲ್ಲಿ ಮಕ್ಕಳಿಗೆ

ಮತ್ತು ಅಧಿಕಾರಿಗಳು ಹಾಗೂ ಅಧಿಕಾರೇತರರಿಗೆ ಕೂರಲು ವ್ಯವಸ್ಥೆ ಮಾಡುವುದು, ಮಾತನಾಡಲು ಧ್ವನಿವರ್ಧಕ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಮಾಡುವುದು.

- ಮಕ್ಕಳ ಗ್ರಾಮ ಸಭೆಗೆ ಹಾಜರಾಗುವ ಮಕ್ಕಳಿಗೆ ಸರಿಯಾದ ಆಸನ, ಕುಡಿಯುವ ನೀರು ಮತ್ತು ಲಘು ಉಪಹಾರದ ವ್ಯವಸ್ಥೆಯನ್ನು ಮಾಡುವುದು.

3.7. ಗ್ರಾಮ ಪಂಚಾಯತಿ ಮಟ್ಟದ ಮಕ್ಕಳ ಗ್ರಾಮ ಸಭೆಯಲ್ಲಿ ಮಕ್ಕಳಿಂದ ಈ ಕೆಳಕಂಡ ನಿರ್ದಿಷ್ಟ ವಿಷಯಗಳ ಕುರಿತು ಚರ್ಚೆಗೆ ಮತ್ತು ಅವರ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶ ನೀಡಿ ಹಾಗೂ ಇಂಥಹ ಸಮಸ್ಯೆಗಳನ್ನು ಪರಿಹರಿಸುವ ಸಲಹೆಗಳನ್ನು ಪಡೆಯುವುದು.

- ತಮ್ಮ ವಸತಿ ಪ್ರದೇಶ/ಶಾಲೆಯಲ್ಲಿನ ಮಕ್ಕಳ ಸ್ಥಿತಿಗತಿಗೆ ಸಂಬಂಧಿಸಿದಂತೆ, ಶಾಲಾ ದಾಖಲಾತಿ, ಶಾಲೆ ಬಿಟ್ಟ ಮಕ್ಕಳು, ಹೆಣ್ಣು ಮಗುವಿನ ಶಿಕ್ಷಣ ಕುರಿತು ಹಾಗೂ ವಿಕಲ ಚೇತನರ ಅಗತ್ಯಗಳು.
- ಬಾಲ್ಯ ವಿವಾಹ, ಮಕ್ಕಳ ಮತ್ತು ಕಿಶೋರಾವಸ್ಥೆಯ ಕಾರ್ಮಿಕತೆ, ಮಕ್ಕಳ ಜೀತ ಪದ್ಧತಿ.
- ಮಕ್ಕಳ ಮೇಲೆ ನಡೆಯುವ ದೌರ್ಜನ್ಯಗಳು, ಮಕ್ಕಳ ಮಾರಾಟ ಮತ್ತು ಸಾಗಾಟ.
- ಹೆಣ್ಣು ಮಕ್ಕಳ ಮೇಲೆ ನಡೆಯುವ ದೌರ್ಜನ್ಯ.
- ಮಕ್ಕಳ ಜನನ ದಾಖಲಾತಿ ಮತ್ತು ಪ್ರಮಾಣ ಪತ್ರ ವಿತರಣೆ.
- ಮಕ್ಕಳಿಗೆ ಚುಚ್ಚು ಮದ್ದು ಮತ್ತು ಪೌಷ್ಟಿಕಾಂಶಗಳ ಲಭ್ಯತೆ.
- ವಸತಿ ನಿಲಯಗಳ ಸಮಸ್ಯೆಗಳು.
- ಇತರೆ ಸರ್ಕಾರಿ ಸೌಲಭ್ಯಗಳ ಲಭ್ಯತೆ ಮತ್ತು ಗುಣಮಟ್ಟ.

3.8. ಮಕ್ಕಳ ಗ್ರಾಮ ಸಭೆಯಲ್ಲಿ ಸಂಬಂಧಿಸಿದ ಇಲಾಖಾ ಅಧಿಕಾರಿಗಳು ಮತ್ತು ಇಲಾಖೇತರರು ಮಕ್ಕಳಿಗೆ ಈ ಕೆಳಕಂಡ ವಿಷಯಗಳ ಕುರಿತು ಅವರಿಗೆ ತಿಳಿಯುವ ಹಾಗೆ ಬಹಳ ಕಡಿಮೆ ಅವಧಿಯಲ್ಲಿ ಸಂಕ್ಷಿಪ್ತವಾಗಿ ತಿಳಿಸಬೇಕು.

- ಮಕ್ಕಳ ಹಕ್ಕುಗಳ (ಬದುಕುವ ಹಕ್ಕು, ರಕ್ಷಣೆಯ ಹಕ್ಕು, ವಿಕಾಸ ಹೊಂದುವ ಹಕ್ಕು, ಭಾಗವಹಿಸುವ ಹಕ್ಕು) ಕುರಿತು.
- ಮಕ್ಕಳಿಗೆ ದೊರಕುವ ರೋಗ ನಿರೋಧಕ ಚುಚ್ಚುಮದ್ದು/ಲಸಿಕೆಗಳು, ಪೌಷ್ಟಿಕ ಆಹಾರ / ಮಾತ್ರೆ/ಪೇಯಗಳು, ಮಕ್ಕಳ ದೇಹದ ತೂಕ ಮತ್ತು ಎತ್ತರದ ಅಳತೆ ಮಾಡುವ ಪ್ರಾಮುಖ್ಯತೆ, ಸ್ಥಳೀಯ ಪ್ರಾಥಮಿಕ ಆರೋಗ್ಯ ಕೇಂದ್ರ/ಉಪ ಆರೋಗ್ಯ ಮತ್ತು ಅಂಗನವಾಡಿ ಕೇಂದ್ರದಲ್ಲಿ ದೊರಕುವ ಸೇವೆಗಳ ಕುರಿತು ತಿಳಿಸಬೇಕು
- ಸರ್ಕಾರದಿಂದ ಮಕ್ಕಳಿಗೆ ಲಭ್ಯವಿರುವ ಉಚಿತ ಶಿಕ್ಷಣ, ಉಚಿತ ಆರೋಗ್ಯ ಸೇವೆಗಳು, ಮಧ್ಯಾಹ್ನದ ಬಿಸಿಯೂಟ, ಉಚಿತ ಪಠ್ಯಪುಸ್ತಕ,ಸಮವಸ್ತ್ರ ಮತ್ತು ಶೂಗಳ ವಿತರಣೆ, ಗ್ರಂಥಾಲಯ ಸೌಕರ್ಯ, ಕ್ರೀಡಾ ಚಟುವಟಿಕೆ, ವಸತಿ ನಿಲಯ, ಪ್ರಾಯೋಜನೆ (ಸ್ಪಾನ್ಸರ್‌ಶಿಪ್), ವಿದ್ಯಾರ್ಥಿ ವೇತನ ಮೊದಲಾದ ವಿಚಾರಗಳನ್ನು ಕುರಿತು ಮಾಹಿತಿ ನೀಡುವುದು.
- ಬಾಲ್ಯವಿವಾಹ ನಿಷೇಧ ಕಾಯ್ದೆ, ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯಿದೆ, ಮಕ್ಕಳ ಸಾಗಾಣಿಕೆ ನಿಷೇಧ ಕಾಯ್ದೆ, ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ನಿಷೇಧ ಕಾಯ್ದೆ, ಮಕ್ಕಳು ಮತ್ತು ಕಿಶೋರಾವಸ್ಥೆಯ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ 2016ರ ತಿದ್ದುಪಡಿಯಂತೆ, ಜೀತ ಪದ್ಧತಿ ನಿಷೇಧ ಕಾಯ್ದೆಗಳ, ವಿಶೇಷ ಚೇತನರ ಹಕ್ಕುಗಳ ಅಧಿನಿಯಮದ ಬಗ್ಗೆ ಹಾಗೂ ಚೈಲ್ಡ್‌ಲೈನ್ 1098 / ಮಕ್ಕಳ ಸಹಾಯವಾಣಿ ಬಗ್ಗೆ ಅರಿವು ಮೂಡಿಸುವುದು

- ಸ್ಥಳೀಯ ಪೊಲೀಸ್ ಠಾಣೆಯ ಪ್ರತಿನಿಧಿಗಳು ಹಾಜರಿದ್ದು ತಮ್ಮಲ್ಲಿ 'ತೆರೆದ ಮನೆ' (ಓಪನ್ ಹೌಸ್) ನಡೆಸುವ ದಿನಾಂಕದ ಮಾಹಿತಿಯನ್ನು ಹಂಚಿಕೊಳ್ಳಬೇಕು. ಚೈಲ್ಡ್‌ಲೈನ್ 1098 ಮತ್ತು ಮಕ್ಕಳ ಸಂರಕ್ಷಣಾ ಘಟಕದ ಸಿಬ್ಬಂದಿಯಿಂದ ಮಕ್ಕಳ ರಕ್ಷಣೆ ವಿಚಾರಗಳನ್ನು ವಿವರಿಸಬೇಕು.
- ಪ್ರಮುಖವಾಗಿ ಕೋವಿಡ್ ಸಮಯದಲ್ಲಿ ಬಾಲ್ಯವಿವಾಹಗಳು ಜರಗುತ್ತಿರುವ ಕುರಿತು ಹಾಗೂ ಮಕ್ಕಳ ಸಾಗಣೆ, ದುಡಿಮೆಗೆ ಮಕ್ಕಳನ್ನು ದೂಡುವುದರ ವಿರುದ್ದ ಜನಜಾಗೃತಿ ಮತ್ತು ಮಕ್ಕಳಲ್ಲಿ ಜಾಗೃತಿ ಮೂಡಿಸುವ ಕುರಿತು ವಿಶೇಷ ಮಾಹಿತಿಗಳನ್ನು ನೀಡಬೇಕು.

3.9. **ಮಕ್ಕಳ ವಿಶೇಷ ಗ್ರಾಮ ಸಭೆಯ ಮಾದರಿ ಕಾರ್ಯಸೂಚಿ:** ಮಕ್ಕಳ ಗ್ರಾಮ ಸಭೆಯಲ್ಲಿ ಮಕ್ಕಳಿಗೆ ಸಂಬಂಧಿಸಿದ ವಿಷಯಗಳ ಹೊರತು ಪಡಿಸಿ ಬೇರೆ ವಿಷಯಗಳ ಕುರಿತು ಚರ್ಚೆ ಆಗದಂತೆ ನೋಡಿಕೊಳ್ಳುವುದು ಮತ್ತು ಮಕ್ಕಳಿಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಹೆಚ್ಚಿನ ಸಮಯವನ್ನು ಕೊಡಬೇಕು. ಸಭೆಯಲ್ಲಿ ಭಾಗವಹಿಸಿದ ಅಧಿಕಾರಿಗಳು ಮತ್ತು ಅಧಿಕಾರೇತರರು ಮಕ್ಕಳು ವ್ಯಕ್ತಪಡಿಸುವ ಅಭಿಪ್ರಾಯಗಳನ್ನು ಮತ್ತು ತಿಳಿಸುವ ಸಮಸ್ಯೆ/ಬೇಡಿಕೆ/ಪ್ರಶ್ನೆಗಳನ್ನು ಗಮನವಿಟ್ಟು ಕೇಳುವುದು ಮತ್ತು ದಾಖಲಿಸುವುದು. ಮಕ್ಕಳ ಗ್ರಾಮ ಸಭೆಯ ಕಾರ್ಯಸೂಚಿಯಲ್ಲಿ ಈ ಕೆಳಕಂಡ ಪ್ರಮುಖ ಅಂಶಗಳು ಇರುವಂತೆ ಕ್ರಮವಹಿಸುವುದು.

- ಸ್ವಾಗತ ಮತ್ತು ಪ್ರಸ್ತಾವಿಕ ನುಡಿ
- ವಿವಿಧ ಇಲಾಖೆಯ ಅಧಿಕಾರಿಗಳಿಂದ ಮಕ್ಕಳಿಗೆ ಸಂಬಂಧಿಸಿದ ಯೋಜನೆ/ಕಾರ್ಯಕ್ರಮಗಳ ಕುರಿತು ಸಂಕ್ಷಿಪ್ತ ಮಾಹಿತಿ.
- ಮಕ್ಕಳ ಸ್ಥಿತಿಗತಿಯ (ಅನುಬಂಧ-ಸಿ ನಲ್ಲಿ ಸಂಗ್ರಹಿಸಲಾದ ಮಾಹಿತಿ) ವಿವರಗಳನ್ನು ಮಂಡಿಸುವುದು, ಚರ್ಚಿಸಿ ಪರಿಹಾರಗಳನ್ನು ಪಡೆಯುವುದು.
- ಹಿಂದಿನ ವರ್ಷದ ಮಕ್ಕಳ ಗ್ರಾಮ ಸಭೆಯ ನಿರ್ಣಯಗಳ ಅನುಪಾಲನಾ ವರದಿಯ ಮಂಡನೆ, ಚರ್ಚೆ ಹಾಗೂ ಅನುಷ್ಠಾನಗೊಳಿಸಲಾದ ಸಮಸ್ಯೆ/ಬೇಡಿಕೆಗಳ ಬಗ್ಗೆ ನಿರ್ಣಯ ತೆಗೆದುಕೊಳ್ಳುವುದು. (ಅನುಷ್ಠಾನಗೊಳಿಸಲಾಗದ ಸಮಸ್ಯೆ/ಬೇಡಿಕೆಗಳ ಬಗ್ಗೆ ಕಾರಣ ಹಾಗೂ ಮುಂದಿನ ಕ್ರಮದ ಕುರಿತು ಚರ್ಚಿಸಿ ನಿರ್ಣಯ ತೆಗೆದುಕೊಳ್ಳುವುದು.)
- ಸಭೆಯಲ್ಲಿ ಭಾಗವಹಿಸಿದ ಮಕ್ಕಳಿಂದ ಸಮಸ್ಯೆಗಳು/ಬೇಡಿಕೆಗಳು/ಪ್ರಶ್ನೆಗಳು
- ಧ್ವನಿ ಪೆಟ್ಟಿಗೆ ಮತ್ತು ಇತರೆ ಮೂಲಗಳಿಂದ ಕೋರಿಕೆ ಪತ್ರದಲ್ಲಿ ಮೂಡಿಬಂದ ಸಮಸ್ಯೆಗಳು/ಬೇಡಿಕೆಗಳು/ಪ್ರಶ್ನೆಗಳನ್ನು ಮಂಡಿಸುವುದು (ಕ್ರೋಡಿಕೃತ ಪಟ್ಟಿ)
- ಮಕ್ಕಳ ಸಮಸ್ಯೆಗಳು/ಬೇಡಿಕೆಗಳು/ಪ್ರಶ್ನೆಗಳನ್ನು ಕುರಿತು ಚರ್ಚಿಸಿ ಕ್ರೋಡೀಕರಿಸುವುದು ಹಾಗೂ ಪರಿಹಾರಕ್ಕೆ ನಿರ್ಣಯಗಳನ್ನು ತೆಗೆದುಕೊಳ್ಳುವುದು.

3.10. **ಗ್ರಾಮ ಪಂಚಾಯತಿ ಮಟ್ಟದ ಮಕ್ಕಳ ಗ್ರಾಮ ಸಭೆಯಲ್ಲಿ**,

- ಮಕ್ಕಳ ಹಕ್ಕುಗಳ ಗ್ರಾಮ/ವಾರ್ಡ್ ಸಬೆಗಳಲ್ಲಿ ಮಕ್ಕಳಿಂದ ವ್ಯಕ್ತಪಡಿಸಲಾದ, ಫೇಸ್ ಬುಕ್ ಪೇಜಿನಲ್ಲಿ ಮೂಡಿಬಂದ, ನೇರವಾಗಿ ಕೋರಿಕೆ ಪತ್ರದ ಮೂಲಕ ಸಲ್ಲಿಸಲಾದ ಮತ್ತು ಮಕ್ಕಳ ಧ್ವನಿ ಪೆಟ್ಟಿಗೆಯಿಂದ ಸಂಗ್ರಹಿಸಲಾದ ಸಮಸ್ಯೆ/ಬೇಡಿಕೆಗಳ/ಪ್ರಶ್ನೆಗಳ ಕುರಿತು ಈಗಾಗಲೇ ಸಿದ್ಧಪಡಿಸಿರುವ ಪಟ್ಟಿಯನ್ನು ಸಬೆಯಲ್ಲಿ ಮಂಡಿಸುವುದು ಹಾಗೂ ಗ್ರಾಮ ಪಂಚಾಯತಿ ಮಕ್ಕಳ ಗ್ರಾಮ ಸಭೆಯಲ್ಲಿ ಮೂಡಿಬರುವ ಸಮಸ್ಯೆಗಳು/ಬೇಡಿಕೆಗಳು/ಪ್ರಶ್ನೆಗಳ ಕುರಿತು ಹಾಗೂ ಹಿಂದಿನ ಮಕ್ಕಳ ಗ್ರಾಮ ಸಭೆಯಲ್ಲಿ ತೆಗೆದುಕೊಳ್ಳಲಾದ ಬಾಕಿ ಇರುವ ನಿರ್ಣಯಗಳನ್ನು ಸಭೆಯಲ್ಲಿ ಚರ್ಚಿಸಿ, ಕ್ರೋಡೀಕರಿಸಿ ಈ ಪಟ್ಟಿಯನ್ನು ಅಂತಿಮಗೊಳಿಸಬೇಕು. ಅಂತಿಮಗೊಳಿಸಲಾದ ಸಮಸ್ಯೆಗಳು/ಬೇಡಿಕೆಗಳು/ಪ್ರಶ್ನೆಗಳ ಪಟ್ಟಿಯನ್ನು ಸಂಬಂಧಿಸಿದ ಇಲಾಖಾ/ಕ್ಷೇತ್ರವಾರು ವಿಂಗಡಿಸಿ ನಮೂನೆ-1ರಲ್ಲಿ ಅಂತಿಮ ಪಟ್ಟಿಯನ್ನು ತಯಾರಿಸುವುದು ಮತ್ತು ಸಭಾ ನಡಾವಳಿ ಪುಸ್ತಕದಲ್ಲಿ ದಾಖಲಿಸುವುದು.
- ಮಕ್ಕಳ ಗ್ರಾಮಸಭೆಯ ಅನುಸರಣೆಯ ದೃಷ್ಟಿಯಿಂದ ಒಂದೇ ಪುಸ್ತಕದಲ್ಲಿ ಈ ನಡಾವಳಿ ಮತ್ತು ಠರಾವುಗಳನ್ನು ಬರೆಯಬೇಕು ಮತ್ತು ಅದನ್ನೇ ಮುಂದಿನ ವರ್ಷಗಳಲ್ಲೂ ಬಳಸಬೇಕು. ಹಿಂದಿನ

ವರ್ಷ/ಗಳಲ್ಲಿ ನಿರ್ವಹಿಸಿದ್ದಲ್ಲಿ ಅದೇ ಪುಸ್ತಕದಲ್ಲಿ ನಡಾವಳಿ ಮತ್ತು ಠರಾವುಗಳನ್ನು ಬರೆಯುವುದು.

- ಮಕ್ಕಳ ಗ್ರಾಮ ಸಭೆಯಲ್ಲಿ ಭಾಗವಹಿಸಿದ ಎಲ್ಲಾ ಅಧಿಕಾರಿಗಳ, ಅಧಿಕಾರೇತರರ ಮತ್ತು ಮಕ್ಕಳ ಸಹಿಗಳನ್ನು ಸಂಬಂಧಿಸಿದ ನಡಾವಳಿ/ಹಾಜರಾತಿ ವಹಿಯಲ್ಲಿ ಪಡೆಯುವುದು.
- ಮಕ್ಕಳ ಗ್ರಾಮ ಸಭೆಯಲ್ಲಿ (ನಮೂನೆ-1) ಅಂತಿಮಗೊಳಿಸಲಾದ ಸಮಸ್ಯೆಗಳು/ಬೇಡಿಕೆಗಳು/ಪ್ರಶ್ನೆಗಳನ್ನು ಮಕ್ಕಳ ಗ್ರಾಮ ಸಭೆಯಲ್ಲಿಯೇ ಸಂಬಂಧಿಸಿದ ಅಧಿಕಾರಿಗಳಿಂದ ಬಗೆಹರಿಸಲು ಸಾಧ್ಯವಿರುವ ಸಮಸ್ಯೆಗಳು/ಬೇಡಿಕೆಗಳು/ಪ್ರಶ್ನೆಗಳನ್ನು ಬಗೆಹರಿಸುವುದು ಹಾಗೂ ಬಗೆಹರಿಸಲಾದ ಸಮಸ್ಯೆಗಳು/ಬೇಡಿಕೆಗಳು/ಪ್ರಶ್ನೆಗಳನ್ನು ಪರಿಹರಿಸಲು ಕ್ಷೇತ್ರವಾರು ಮತ್ತು ಇಲಾಖಾವಾರು ಸಂಬಂಧಿಸಿದ ಇಲಾಖಾ ಅಧಿಕಾರಿಗಳಿಂದ ತೆಗೆದುಕೊಳ್ಳಬೇಕಾದ ಪರಿಹಾರ, ಕ್ರಮ ಮತ್ತು ಕಾಲಾವಧಿಯನ್ನು ನಿಗದಿಗೊಳಿಸಿ ಕ್ರಿಯಾಯೋಜನೆಯನ್ನು ಈ ಪತ್ರದೊಂದಿಗೆ ನೀಡಲಾದ ನಮೂನೆ-2ರಲ್ಲಿ ತಯಾರಿಸುವುದು. ಸಭಾನಡಾವಳಿ ಮತ್ತು ತಯಾರಿಸಲಾದ ಕ್ರಿಯಾ ಯೋಜನೆಯ ವಿವರಗಳನ್ನು ಪಂಚತಂತ್ರದಲ್ಲಿ ಅಪ್‌ಲೋಡ್ ಮಾಡುವುದು.
- ಮಕ್ಕಳ ಗ್ರಾಮಸಭೆಯ ನಡಾವಳಿಗಳು ಮತ್ತು ಠರಾವುಗಳ ಪ್ರತಿಯನ್ನು ತಮ್ಮ ವ್ಯಾಪ್ತಿಯ ಎಲ್ಲಾ ಶಾಲೆಗಳಿಗೆ, ವಸತಿ ನಿಲಯಗಳಿಗೆ, ಮಕ್ಕಳ ಪಾಲನಾ ಕೇಂದ್ರ, ಅಂಗನವಾಡಿ ಕೇಂದ್ರಗಳಿಗೆ ಮತ್ತು ಆರೋಗ್ಯ ಕೇಂದ್ರಗಳಿಗೆ ಹಾಗೂ ಸ್ವಯಂಸೇವಾ ಸಂಘಟನೆಗಳಿಗೆ ಒಂದು ತಿಂಗಳ ಒಳಗೆ ಕಳುಹಿಸಿ ಅವರಿಂದ ಪ್ರತಿಕ್ರಿಯೆಗಳನ್ನು ತೆಗೆದುಕೊಂಡು ದಾಖಲಿಸುವುದು
- ಗ್ರಾಮ ಪಂಚಾಯತಿ ಮಟ್ಟದಲ್ಲಿ ನಡೆದ ಮಕ್ಕಳ ಗ್ರಾಮ ಸಭೆಯ ಠರಾವುಗಳು, ರೂಪಿಸಲಾದ ಕ್ರಿಯಾ ಯೋಜನೆ, ಗ್ರಾಮ ಪಂಚಾಯತಿಯಿಂದ ಅನುಷ್ಠಾನ ಮತ್ತು ಅನುಸರಣೆಗೆ ಸಂಬಂದಿಸಿದಂತೆ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಹಲವಾರು ಭಾಗೀದಾರರ ಜೊತೆ ಸಮನ್ವಯತೆಯಿಂದ ಕಾರ್ಯನಿರ್ವಹಿಸುವುದು ಹಾಗೂ ಮಕ್ಕಳಿಗೆ ಸಂಬಂಧಿಸಿದ ಗ್ರಾಮ ಪಂಚಾಯತಿ ಮಟ್ಟದಲ್ಲಿನ ಎಲ್ಲಾ ಸಮಿತಿಗಳ ಗಮನಕ್ಕೆ ತರುವುದು ಮತ್ತು ಸದರಿ ಸಮಿತಿಗಳಿಂದ ಮಕ್ಕಳ ಗ್ರಾಮ ಸಭೆಯ ನಿರ್ಣಯಗಳು ಮತ್ತು ಕ್ರಿಯಾ ಯೋಜನೆಯು ಮಕ್ಕಳ ಗ್ರಾಮ ಸಭೆ ನಡೆದ 03 ತಿಂಗಳ ಒಳಗೆ ಗ್ರಾಮ ಪಂಚಾಯತಿಯಿಂದ ಅನುಷ್ಠಾನವಾಗುವಂತೆ ಹಾಗೂ ಪ್ರಗತಿ ವರದಿ ಸಲ್ಲಿಸುವಂತೆ ಅಗತ್ಯ ಕ್ರಮ ಕೈಗೊಳ್ಳುವುದು.

4. **ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳ ಜವಬ್ದಾರಿ:** ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ತಾಲ್ಲೂಕಿನಲ್ಲಿನ ಗ್ರಾಮ ಪಂಚಾಯತಿಗಳಲ್ಲಿ ಈ ಮೇಲೆ ವಿವರಿಸಿರುವಂತೆ 16-05-2022 30-07-2022 ರವರೆಗೆ 10 ವಾರಗಳ "ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ" ಮತ್ತು ಮಕ್ಕಳ ಗ್ರಾಮ ಸಭೆ ಸೇರಿದಂತೆ ವಿವಿದ ಕಾರ್ಯಕ್ರಮಗಳು ಪರಿಣಾಮಕಾರಿಯಾಗಿ ನಡೆಸಲು ಹಾಗೂ ಮಕ್ಕಳ ಸುರಕ್ಷತೆಯೊಂದಿಗೆ ಮಕ್ಕಳಿಗೆ ಸಂಬಂದಿಸಿದ ಸುಸ್ಥಿರ ಗುರಿಗಳ ಎಲ್ಲಾ ಅಂಶಗಳ ಪರಿಣಾಮಕಾರಿ ಅನುಷ್ಠಾನದೊಂದಿಗೆ ಮಕ್ಕಳ ಸ್ನೇಹಿ ಮತ್ತು ಮಕ್ಕಳ ಸುರಕ್ಷಿತ ಪಂಚಾಯತಿಗಳಾಗಿಸಲು ಸೂಕ್ತ ಮಾರ್ಗದರ್ಶನಕ್ಕಾಗಿ ಮತ್ತು ಸಮನ್ವಯತೆಗಾಗಿ ಈ ಕೆಳಕಂಡ ಜವಬ್ದಾರಿ ನಿರ್ವಹಿಸುವುದು.
    - ಪಂಚಾಯಿತಿ ಅಧ್ಯಕ್ಷರು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಸ್ವಯಸಹಾಯ ಸಂಘಗಳ ಪ್ರತಿನಿಧಿಗಳೊಂದಿಗೆ ಪೂರ್ವ ಬಾವಿ ಸಭೆನಡೆಸುವುದು.
    - ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಸಮನ್ವಯತೆಯಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು ಭಾಗವಹಿಸಲು ಅನುಕೂಲವಾಗುವಂತೆ ಮಕ್ಕಳ ಗ್ರಾಮ ಸಭೆಯ

ದಿನಾಂಕವನ್ನು ನಿಗದಿಗೊಳಿಸುವುದು ಹಾಗೂ ಸೂಕ್ತ ಮಾರ್ದರ್ಶನ ಮತ್ತು ಸಲಹೆ ನೀಡುವುದು.

- ವಿವಿಧ ಇಲಾಖೆಗಳ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಮಕ್ಕಳ ಗ್ರಾಮ ಸಭೆಯಲ್ಲಿ ಭಾಗವಹಿಸಲು ಹಾಗೂ ಮಕ್ಕಳ ಸಮಸ್ಯೆಗಳು/ಬೇಡಿಕೆಗಳು/ಪ್ರಶ್ನೆಗಳನ್ನು ಬಗೆಹರಿಸಲು ಸೂಕ್ತ ನಿರ್ದೇಶನ ನೀಡುವುದು.
- ಹಣಕಾಸಿನ ನೆರವು ಇಲ್ಲದೆ ತೊಡಗಿಸಿಕೊಳ್ಳಲು ಆಸಕ್ತಿ ಇರುವ ಸ್ವಯಂ ಸೇವಾ ಸಂಸ್ಥೆಗಳನ್ನು ತೊಡಗಿಸಿಕೊಳ್ಳಲು ಕ್ರಮವಹಿಸುವುದು.
- ತಾಲ್ಲೂಕಿನ ಎಲ್ಲಾ ಗ್ರಾಮ ಪಂಚಾಯತಿಗಳ ಮಕ್ಕಳ ಗ್ರಾಮ ಸಭೆಯ ಸಭಾ ನಡಾವಳಿ, ಕ್ರಿಯಾ ಯೋಜನೆಯನ್ನು ಗ್ರಾಮ ಪಂಚಾಯತಿಗಳಿಂದ ಪಂಚತಂತ್ರದಲ್ಲಿ ಅಳವಡಿಸಲು ಸೂಕ್ತ ಕ್ರಮ ಮತ್ತು ವರದಿಯನ್ನು ತಮ್ಮ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸಲ್ಲಿಸುವುದು.
- ಗ್ರಾಮ ಪಂಚಾಯತಿ ಮಕ್ಕಳ ಗ್ರಾಮ ಸಭೆಯಲ್ಲಿ ತಯಾರಿಸಲಾದ ಕ್ರಿಯಾ ಯೋಜನೆಯನ್ನು ಗ್ರಾಮ ಪಂಚಾಯಿತಿ ಸಭೆಯಲ್ಲಿ ಚರ್ಚಿಸಿ ಅನುಮೋದನೆ ಪಡೆದು 03 ತಿಂಗಳೊಳಗೆ ಅನುಷ್ಠಾನಗೊಳಿಸಲು ಅನುಸರಣೆ ಮತ್ತು ಸೂಕ್ತ ಕ್ರಮಗಳನ್ನು ತೆಗೆದುಕೊಂಡು, ತಾವು ತೆಗೆದುಕೊಂಡ ಕ್ರಮದ ವರದಿಯನ್ನು ತಮ್ಮ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸಲ್ಲಿಸುವುದು.

**5. ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಜವಬ್ದಾರಿ:**

- ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ಜಿಲ್ಲೆಯ ವ್ಯಾಪ್ತಿಯಲ್ಲಿನ ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿಗಳಿಗೆ, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಉಲ್ಲೇಖಿತ ಸುತ್ತೋಲೆಗಳಲ್ಲಿ ತಿಳಿಸಿರುವಂತೆ ಹಾಗೂ ಈ ಮೇಲೆ ವಿವರಿಸಿರುವಂತೆ "ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ" ದ ಅಂಗವಾಗಿ ವಿವಿಧ ಕಾರ್ಯಕ್ರಮಗಳು ಪರಿಣಾಮಕಾರಿಯಾಗಿ ನಡೆಸಲು ಹಾಗೂ ಮಕ್ಕಳ ಸುರಕ್ಷತೆಯೊಂದಿಗೆ ಮಕ್ಕಳಿಗೆ ಸಂಬಂಧಿಸಿದ ಎಲ್ಲಾ ಸುಸ್ಥಿರ ಗುರಿಗಳ ಪರಿಣಾಮಕಾರಿ ಸಾಧನೆಗೆ ಸೂಕ್ತ ಕ್ರಿಯಾ ಯೋಜನೆ ತಯಾರಿ ಹಾಗೂ ಅನುಷ್ಠಾನದೊಂದಿಗೆ ಮಕ್ಕಳ ಸ್ನೇಹಿ ಮತ್ತು ಮಕ್ಕಳ ಸುರಕ್ಷಿತ ಪಂಚಾಯತಿಗಳಾಗಿಸಲು ಸೂಕ್ತ ಮಾರ್ಗದರ್ಶನಗಳನ್ನು ಮತ್ತು ಕಡ್ಡಾಯವಾಗಿ ಕೋವಿಡ್-19 ಹರಡದಂತೆ ಮುಂಜಾಗ್ರತ ಕ್ರಮಗಳನ್ನು ಪಾಲಿಸಲು ನಿರ್ದೇಶನ ನೀಡಿ ತಮ್ಮ ಜಿಲ್ಲೆಯಲ್ಲಿನ ಗ್ರಾಮ ಪಂಚಾಯತಿಗಳಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಿದ, ಸುಸ್ಥಿರ ಗುರಿಗಳ ಸಾಧನಗೆ ತೆಗೆದುಕೊಳ್ಳಲಾದ ಕ್ರಮ ಮತ್ತು ಕ್ರಿಯಾ ಯೋಜನೆ ತಯಾರಿ ಬಗ್ಗೆ ಸರ್ಕಾರಕ್ಕೆ ವರದಿಯನ್ನು ಸಲ್ಲಿಸುವುದು.
- ಹಣಕಾಸಿನ ನೆರವು ಇಲ್ಲದೆ ಜಿಲ್ಲೆಯಲ್ಲಿನ ಸ್ವಯಂ ಸೇವಾ ಸಂಸ್ಥೆಗಳನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳುವುದು ಹಾಗೂ ಮಾನವ ಸಂಪನ್ಮೂಲ ಮತ್ತು ಸಾಮರ್ಥ್ಯವಿರುವ ಸ್ವಯಂ ಸೇವಾ ಸಂಸ್ಥೆಗಳಿಗೆ ತಾಲ್ಲುಕು/ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಯನಿರ್ವಹಿಸಲು ಹಂಚಿಕೆ ಮಾಡುವುದು.
- "ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ" ಮತ್ತು ಮಕ್ಕಳ ಗ್ರಾಮ ಸಭೆ ಕುರಿತು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮೂಲಕ, ಮಾಧ್ಯಮಗಳಲ್ಲಿ ಹೆಚ್ಚಿನ ರೀತಿಯ ಪ್ರಚಾರ ಮಾಡಲು ಹಾಗೂ ಮಕ್ಕಳ ಕೋರಿಕೆ ಪತ್ರವನ್ನು ಪತ್ರಿಕೆಗಳಲ್ಲಿ ಪ್ರಕಟಿಸಲು ಸೂಕ್ತ ಕ್ರಮ ಕೈಗೊಳ್ಳುವುದು.

ಮೇಲೆ ವಿವರಿಸಿರುವಂತೆ ರಾಜ್ಯ ಮಟ್ಟದಿಂದ ಗ್ರಾಮ ಪಂಚಾಯತಿ ಮಟ್ಟದ ಸಂಬಂಧಿಸಿದ ಎಲ್ಲಾ ಅಧಿಕಾರಿಗಳು ಸ್ಥಳೀಯ ಸಮುದಾಯ ಮತ್ತು ಅಧಿಕಾರೇತರರನ್ನು ತೊಡಗಿಸಿಕೊಂಡು ಕೋವಿಡ್ ಹರಡದಂತೆ ಸುರಕ್ಷಿತ ನಿಯಮಗಳನ್ನು ಅನುಸರಿಸಿ 16-05-2022 ರಿಂದ 30-07-2022 ರವರೆಗೆ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ವಿನೂತನವಾಗಿ "ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ" ವನ್ನು ಪರಿಣಾಮಕಾರಿಯಾಗಿ ನಡೆಸಿ, ಗ್ರಾಮ ಪಂಚಾಯತಿಗಳಿಂದ ಸುಸ್ಥಿರ ಗುರಿಗಳ ಸಾಧನೆ ಮೂಲಕ ಮಕ್ಕಳ ಸ್ನೇಹಿ ಮತ್ತು ಮಕ್ಕಳ ಸುರಕ್ಷಿತ ಗ್ರಾಮ ಪಂಚಾಯತಿಗಳನ್ನಾಗಿಸಲು ಸೂಚಿಸಿದೆ.

ವಿವಿಧ ಜಿಲ್ಲೆಗಳ ಉಸ್ತುವಾರಿಯನ್ನು ನಿರ್ವಹಿಸುತ್ತಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ, ಪಂಚಾಯತ್ ರಾಜ್ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಂಸ್ಥೆಯ ಅಧಿಕಾರಿಗಳು ತಮ್ಮ ತಮ್ಮ ಉಸ್ತುವಾರಿ ಜಿಲ್ಲೆಗಳ ಭೇಟಿಯ ಸಮಯದಲ್ಲಿ "ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ" ಮತ್ತು ಮಕ್ಕಳ ಗ್ರಾಮ ಸಭೆ ಕುರಿತು ಗಮನಹರಿಸಲು ಮತ್ತು ಅಗತ್ಯ ಕ್ರಮಕ್ಕೆ ಕೋರಿದೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಿಂದ ಗ್ರಾಮ ಪಂಚಾಯತಿಗಳಲ್ಲಿ ವಿನೂತನವಾಗಿ ಹಮ್ಮಿಕೊಳ್ಳಲಾದ "ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ" ಕಾರ್ಯಕ್ರಮದ ಮೂಲಕ ತಯಾರಿಸಲಾದ ಕಾರ್ಯಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಮತ್ತು ಸುಸ್ಥಿರ ಗುರಿಗಳ ಸಾಧನೆ ಮೂಲಕ ಮಕ್ಕಳ ಸ್ನೇಹಿ ಮಕ್ಕಳ ಸುರಕ್ಷಿತ ಗ್ರಾಮ ಪಂಚಾಯತಿಗಳನ್ನಾಗಿಸಲು ಸರ್ಕಾರದ ವಿವಿಧ ಇಲಾಖೆಗಳು ಸಮನ್ವಯತೆಯಿಂದ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಲು ಹಾಗೂ ತಮ್ಮ ಇಲಾಖೆಗಳಿಂದ ಈ 12 ವಾರಗಳ ಅವಧಿಯಲ್ಲಿ ಮಕ್ಕಳ ಹಕ್ಕುಗಳ ಸಂರಕ್ಷಣೆಗೆ ವಿನೂತನ ಕಾರ್ಯಕ್ರಮಗಳನ್ನು ನಡೆಸಲು ಸಂಬಂದಿಸಿದಂತೆ ಪೂರ್ಣ ಬೆಂಬಲ ನೀಡಲು ಜಿಲ್ಲಾ ಪಂಚಾಯಿತಿ, ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿ ಮಟ್ಟದ ತಮ್ಮ ಇಲಾಖೆಯ ಅಧೀನ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲು ರಾಜ್ಯ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಕೋರಿದೆ.

(ಉಮಾ ಮಹಾದೇವನ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

**ಇವರಿಗೆ:**

1. ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ
2. ಎಲ್ಲಾ ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ (ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ)
3. ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ (ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ)
4. ಕಛೇರಿ ಪ್ರತಿ

**ಪ್ರತಿಯನ್ನು ಮಾಹಿತಿಗಾಗಿ ಮತ್ತು ಪೂರ್ಣ ಬೆಂಬಲಕ್ಕಾಗಿ:**

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿ
3. ಸರ್ಕಾರದ ಅಪರ ಕಾರ್ಯದರ್ಶಿ, ಗೃಹ ಇಲಾಖೆ ರವರ ಆಪ್ತ ಕಾರ್ಯದರ್ಶಿ
4. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ, ಯೋಜನಾ ಕಾರ್ಯಕ್ರಮಗಳ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ
6. ಸಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ ರವರ ಆಪ್ತ ಕಾರ್ಯದರ್ಶಿ.
7. ಸಕಾರದ ಅಪರ ಮುಖ್ಯ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
8. ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
9. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲ ಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆರವರ ಆಪ್ತ ಕಾರ್ಯದರ್ಶಿ.
10. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರವರ ಆಪ್ತ ಕಾರ್ಯದರ್ಶಿ
11. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ರವರ ಆಪ್ತ ಕಾರ್ಯದರ್ಶಿ
12. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪೌಢ ಶಿಕ್ಷಣ ಇಲಾಖೆ ರವರ ಆಪ್ತ ಕಾರ್ಯದರ್ಶಿ
13. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಾರ್ಮಿಕ ಇಲಾಖೆ ರವರ ಆಪ್ತ ಕಾರ್ಯದರ್ಶಿ, ಬೆಂಗಳೂರು.
14. ಸರ್ಕಾರದ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ರವರ ಆಪ್ತ ಕಾರ್ಯದರ್ಶಿ
15. ಸರ್ಕಾರದ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ರವರ ಆಪ್ತ ಕಾರ್ಯದರ್ಶಿ
16. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
17. ಆಯುಕ್ತರು, ಗ್ರಾಮೀಣಾಭಿವೃದ್ಧಿ, ಗ್ರಾಮೀಣಾಭಿವೃದ್ಧಿಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
18. ಆಯುಕ್ತರು, ಪಂ.ರಾಜ್‌ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿ.
19. ಆಯುಕ್ತರು, ಗ್ರಾಮೀಣ ನೀರು ಸರಭರಾಜು ಮತ್ತು ನೈರ್ಮಲ್ಯ ಇಲಾಖೆ ರವರ ಆಪ್ತ ಕಾರ್ಯದರ್ಶಿ
20. ಆಯುಕ್ತರು, ಕಾರ್ಮಿಕ ಇಲಾಖೆ , ಕಾರ್ಮಿಕ ಭವನ, ಬೆಂಗಳೂರು.
21. ನಿರ್ದೇಶಕರು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು
22. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ.
23. ನಿರ್ದೇಶಕರು, ವಿಕಲಚೇತನರು ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆ, ಬೆಂಗಳೂರು
24. ನಿರ್ದೇಶಕರು,ಮಕ್ಕಳ ಸಂರಕ್ಷಣಾ ನಿರ್ದೇಶನಾಲಯ / ಐ.ಸಿ.ಪಿ.ಎಸ್, ಕರ್ನಾಟಕ ಸರ್ಕಾರ
25. ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಬೆಂಗಳೂರು.
26. ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು

**ಅನುಬಂದ-ಎ**

ಗ್ರಾಮ ಪಂಚಾಯತಿಗಳಲ್ಲಿ **"ಮಕ್ಕಳ ಸ್ನೇಹಿ ಗ್ರಾಮ ಪಂಚಾಯಿತಿ ಅಭಿಯಾನ"**

ಮತ್ತು **"ಮಕ್ಕಳ ಗ್ರಾಮ ಸಭೆ"** ಯ

# ಕಾರ್ಯಚಟುವಟಿಕೆಗಳ ವೇಳಾ ಪಟ್ಟಿ

ದಿನಾಂಕ **01-05-2022 ರಿಂದ 30-07-2022ರ ವರೆಗೆ** "ಮಕ್ಕಳ ಸ್ನೇಹಿ ಗ್ರಾಮ ಪಂಚಾಯಿತಿ ಅಭಿಯಾನ" ಮತ್ತು ಒಂದು ದಿನ ಮಕ್ಕಳ ವಿಶೇಷ ಗ್ರಾಮ ಸಭೆಯನ್ನು ನಡೆಸಲು ಸಂಬಂಧಿಸಿದಂತೆ ಕಾರ್ಯಚಟುವಟಿಕೆಗಳ ವೇಳಾಪಟ್ಟಿ. (ಇದು ಕೇವಲ ಮಾದರಿ ಮತ್ತು ಮಾರ್ಗದರ್ಶಿಯಾಗಿದ್ದು ಸ್ಥಳೀಯವಾಗಿ ಅಗತ್ಯ ಬದಲಾವಣೆಗಳನ್ನು ಮಾಡಿಕೊಳ್ಳಬಹುದಾಗಿದೆ)

| **ಪೂರ್ವ ತಯಾರಿ** | | |
|---|---|---|
| **ಕ್ರಮ ಸಂಖ್ಯೆ** | **ಕಾರ್ಯವಟುವಟಿಕೆ/ಕಾರ್ಯಕ್ರಮ** | **ತಾತ್ಕಾಲಿಕ ದಿನಾಂಕ/ಅವಧಿ** |
| 1 | ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಎಲ್ಲಾ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳೊಂದಿಗೆ ಮತ್ತು ಜಿಲ್ಲೆಯಲ್ಲಿನ ಸ್ವಯಂ ಸೇವಾ ಸಂಸ್ಥೆಗಳು ಮತ್ತು ಸಂಸ್ಥೆಗಳ ಪ್ರತಿನಿಧಿಗಳೊಂದಿಗೆ ಸಭೆ ನಡೆಸುವುದು. | 01 ರಿಂದ 05 ಮೇ 2022 ರೊಳಗೆ |
| 2 | ಎಲ್ಲಾ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಎಲ್ಲಾ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳೊಂದಿಗೆ ಹಾಗೂ ತಾಲ್ಲೂಕಿನ ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳೊಂದಿಗೆ ಸಭೆ ನಡೆಸುವುದು. | 06 ರಿಂದ 09 ಮೇ 2022 ರೊಳಗೆ |
| 3 | ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಗ್ರಾಮ ಪಂಚಾಯಿತಿ ಮಟ್ಟದ ಮಕ್ಕಳ ಗ್ರಾಮ ಸಭೆಗೆ ದಿನಾಂಕ ನಿಗದಿಗೊಳಿಸುವುದು. | 06 ರಿಂದ 09 ಮೇ 2022 ರೊಳಗೆ |
| 4 | ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಮಕ್ಕಳ ಗ್ರಾಮ ಸಭೆಯಲ್ಲಿ ಭಾಗವಹಿಸಲು ಸೂಕ್ತ ನಿರ್ದೇಶನ ನೀಡಿ ಕ್ರಮವಹಿಸುವುದು. | 06 ರಿಂದ 09 ಮೇ 2022 ರೊಳಗೆ |
| 5 | 2020 ಮತ್ತು 2021 ನೇ ಸಾಲಿನಲ್ಲಿ ನಡೆಸಲಾದ ಮಕ್ಕಳ ಗ್ರಾಮ ಸಭೆಯಲ್ಲಿ ತೆಗೆದುಕೊಳ್ಳಲಾದ ನಿರ್ಣಯಗಳ ಅನುಪಾಲನಾ ವರದಿಯನ್ನು ಸಿದ್ಧಪಡಿಸುವುದು. | 10 ರಿಂದ 12 ಮೇ 2022 ರೊಳಗೆ |
| 6 | **ಪೂರ್ವ ತಯಾರಿ ಸಭೆ:** ಗ್ರಾಮ ಪಂಚಾಯಿತಿಯಿಂದ "ಮಕ್ಕಳ ಸ್ನೇಹಿ ಗ್ರಾಮ ಪಂಚಾಯಿತಿ ಅಭಿಯಾನ" ಮತ್ತು ಒಂದು ದಿನ ಮಕ್ಕಳ ಗ್ರಾಮ ಸಭೆಯನ್ನು ನಡೆಸಲು ಸಂಬಂಧಿಸಿದಂತೆ ಪೂರ್ವ ತಯಾರಿ ಸಭೆಯನ್ನು ನಡೆಸುವುದು. ಇಲಾಖೆ ಮತ್ತು ಇಲಾಖೇತರ ಎಲ್ಲ ಭಾಗೀದಾರರನ್ನು, ಗ್ರಾಮ ಪಂಚಾಯಿತಿ ಮಟ್ಟದ ಮಕ್ಕಳ ಮತ್ತು ಮಹಿಳೆಯರಿಗೆ ಸಂಬಂಧಿಸಿ ಸಮಿತಿಗಳ ಸದಸ್ಯರನ್ನು ಆಹ್ವಾನಿಸುವುದು. | 12 ರಿಂದ 13 ಮೇ 2022 ರೊಳಗೆ |

| | | |
|---|---|---|
| 7 | "ಮಕ್ಕಳ ಸ್ನೇಹಿ ಗ್ರಾಮ ಪಂಚಾಯಿತಿ ಅಭಿಯಾನ" ಮತ್ತು ಮಕ್ಕಳ ಗ್ರಾಮ ಸಭೆಯ ಕಾರ್ಯಕ್ರಮಗಳ ವೇಳಾ ಪಟ್ಟಿಯನ್ನು ಸಿದ್ಧಪಡಿಸಿಕೊಳ್ಳುವುದು. | 12 ರಿಂದ 13 ಮೇ 2022 ರೊಳಗೆ |
| 8 | ಪೂರ್ವ ತಯಾರಿ ಸಭೆಯಲ್ಲಿ ಗ್ರಾಮ ಪಂಚಾಯಿತಿ ಶಿಕ್ಷಣ ಕಾರ್ಯಪಡೆಯಲ್ಲಿನ ಒಬ್ಬ ಅಧಿಕಾರಿ/ಅಧಿಕಾರೇತರ ವ್ಯಕ್ತಿಯನ್ನು ಪಂಚಾಯಿತಿ ಬಾಲ ಮಿತ್ರ ಎಂದು ಗುರುತಿಸಿ ಘೋಷಿಸುವುದು. | 12 ರಿಂದ 13 ಮೇ 2022 ರೊಳಗೆ |
| 9 | ಪ್ರತಿ ವಾರ್ಡ್ ಮಟ್ಟದ ಮತ್ತು ಗ್ರಾಮ ಪಂಚಾಯತಿ ಮಟ್ಟದ ಮಕ್ಕಳ ಪರಿಸ್ಥಿತಿಯನ್ನು (2020-2021 ಮತ್ತು 2021-2022 ನೇ ಸಾಲಿನ ಮಾದರಿ ಚಾರ್ಟ್ ನಲ್ಲಿ ಸಂಗ್ರಹಿಸುವುದು ಹಾಗೂ ಇಲಾಖೆಯ ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸುವುದು. | 10 ರಿಂದ 15 ಮೇ 2022 ರೊಳಗೆ |
| 10 | ಗ್ರಾಮ ಪಂಚಾಯಿತಿಯಿಂದ "ಮಕ್ಕಳ ಸ್ನೇಹಿ ಗ್ರಾಮ ಪಂಚಾಯಿತಿ ಅಭಿಯಾನ"ಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಫೇಸ್ ಬುಕ್ ಪೇಜ್ ರಚಿಸುವುದು ಮತ್ತು ಪ್ರಚಾರ ಮಾಡುವುದು. (ಈಗಾಗಲೇ ಸೃಜಿಸಿದ್ದಲ್ಲಿ ಪ್ರಚಾರ ಮಾಡುವುದು) | 10 ರಿಂದ 15 ಮೇ 2022 ರೊಳಗೆ |
| 11 | ಮಕ್ಕಳ ಕೋರಿಕೆ ಪತ್ರ ಮುದ್ರಿಸುವುದು, ಪೋಸ್ಟರ್ ತಯಾರಿಸುವುದು, ಮಕ್ಕಳ ಧನಿ ಪೆಟ್ಟಿಗೆ ಸಿದ್ಧಪಡಿಸುವುದು. | 10 ರಿಂದ 15 ಮೇ 2022 ರೊಳಗೆ |
| 12 | ಗುರುತಿಸಲಾದ ಬಾಲಮಿತ್ರರ ವಿವರಗಳನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸುವುದು. | 12 ರಿಂದ 13 ಮೇ 2022 ರೊಳಗೆ |
| 13 | ಬಾಲಮಿತ್ರರಿಗೆ ಆನ್ ಲೈನ್ ತರಬೇತಿ ಕಾರ್ಯಕ್ರಮ (ಪಂಚಾಯತ್ ರಾಜ್ ಆಯುಕ್ತಾಲಯದಿಂದ) | 14 ಮೇ 2022 ರೊಳಗೆ |
| 14 | ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಸರ್ಕಾರಿ ಕಛೇರಿ, ಸಂಸ್ಥೆಗಳಲ್ಲಿ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಪೋಸ್ಟರ್ ಅಂಟಿಸಿ ಧನಿ ಪೆಟ್ಟಿಗೆಯನ್ನು ಮತ್ತು ಕೋರಿಕೆ ಪತ್ರಗಳನ್ನು ಇರಿಸುವುದು. | 15 ಮೇ 2022 ರೊಳಗೆ |
| **ಮಕ್ಕಳ ಸ್ನೇಹಿ ಗ್ರಾಮ ಪಂಚಾಯಿತಿ ಅಭಿಯಾನ ಮತ್ತು ಮಕ್ಕಳ ಗ್ರಾಮ ಸಭೆ ಆಯೋಜನೆ ದಿನಾಂಕ 16-05-2022 ರಿಂದ 30-07-2022** | | |
| 15 | ಮಕ್ಕಳಿಗೆ ಬೇಸಿಗೆ ಶಿಭಿರವನ್ನು ಆಯೋಜಿಸುವುದು. | ಅಭಿಯಾನದ ಅವಧಿಯಲ್ಲಿ |
| 16 | ಮಕ್ಕಳಿಗೆ ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಆಟೋಟಗಳನ್ನು ಆಯೋಜಿಸುವುದು. | ಅಭಿಯಾನದ ಅವಧಿಯಲ್ಲಿ |
| 17 | ಮಕ್ಕಳ ಅಭಿವೃದ್ಧಿಗೆ ಸಂಬಂಧಿಸಿದ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸಲು ಪೂರಕ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳನ್ನು ಆಯೋಜಿಸುವುದು. | ಅಭಿಯಾನದ ಅವಧಿಯಲ್ಲಿ |
| 18 | ಶಿಕ್ಷಣ ಕಾರ್ಯಪಡೆಯಿಂದ ಮಕ್ಕಳನ್ನು ಗ್ರಂಥಾಲಯಕ್ಕೆ ನೋಂದಾವಣೆ ಮಾಡುವುದು ಮತ್ತು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ 18 ವರ್ಷದೊಳಗಿನ ಎಲ್ಲಾ ಮಕ್ಕಳ ನೋಂದಣಿಯನ್ನು ಖಾತರಿಪಡಿಸಿಕೊಳ್ಳುವುದು. | ಅಭಿಯಾನದ ಅವಧಿಯಲ್ಲಿ |

| | | |
|---|---|---|
| 19 | ಗ್ರಾಮ ಪಂಚಾಯಿತಿ ಶಿಕ್ಷಣ ಕಾರ್ಯಪಡೆಯಿಂದ ಗ್ರಾಮ ಪಂಚಾಯಿತಿ ಗ್ರಂಥಾಲಯಗಳಲ್ಲಿ ವಿಜ್ಞಾನ ಕಾರ್ಯಕ್ರಮಗಳನ್ನು ಆಯೋಜಿಸುವುದು. | ಅಭಿಯಾನದ ಅವಧಿಯಲ್ಲಿ |
| 20 | ಗ್ರಾಮ ಪಂಚಾಯಿತಿಯಿಂದ **ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನವನ್ನು** ಆಯೋಜಿಸುವುದು. | 12 ಜೂನ್ 2022 ರಂದು |
| 21 | ಮಕ್ಕಳ ಹಕ್ಕುಗಳು, ಬಾಲ್ಯ ವಿವಾಹ, ಬಾಲ ಕಾರ್ಮಿಕತೆ, ಜೀತ ಪದ್ಧತಿ, ಸಾಮಾಜಿಕ ಪಿಡುಗುಗಳ ಬಗ್ಗೆ, ಶಿಕ್ಷಣದ ಮಹತ್ವ ಕುರಿತು ಜಾಗೃತಿ ಮೂಡಿಸುವುದು. | ಅಭಿಯಾನದ ಅವಧಿಯಲ್ಲಿ |
| 22 | ಶಾಲಾ ಕಾಲೇಜುಗಳಲ್ಲಿ ಮಕ್ಕಳ ಹಕ್ಕುಗಳ ಕುರಿತು ಬಾಷಣ, ಪ್ರಬಂಧ ಸ್ಪರ್ದೆಗಳನ್ನು ಆಯೋಜಿಸುವುದು. | ಅಭಿಯಾನದ ಅವಧಿಯಲ್ಲಿ |
| 23 | ವಾರ್ಡ್ ಮಟ್ಟದ ಮಕ್ಕಳ ಗ್ರಾಮ ಸಭೆಯನ್ನು ನಡೆಸುವುದು (ಸ್ಥಳೀಯ ಪರಿಸ್ಥಿತಿಗೆ ಅನುಗುಣವಾಗಿ) | ಗ್ರಾಮ ಪಂಚಾಯಿತಿ ಮಟ್ಟದ ಮಕ್ಕಳ ಗ್ರಾಮ ಸಭೆಯ 05 ದಿನಗಳ ಮುಂಚಿತವಾಗಿ |
| 24 | ಪೇಸ್ ಬುಕ್ ಪೇಜಿನಿಂದ, ಮಕ್ಕಳ ಧನಿ ಪೆಟ್ಟಿಗೆಯಿಂದ, ವಾರ್ಡ್ ಮಟ್ಟದ ಸಭೆಗಳಿಂದ, ಸ್ವೀಕರಿಸಲಾದ ಸಮಸ್ಯೆಗಳು/ಬೇಡಿಕೆಗಳು/ಪ್ರಶ್ನೆಗಳನ್ನು ಕ್ರೋಡೀಕರಿಸಿ ಪಟ್ಟಿಯನ್ನು ಸಿದ್ಧಪಡಿಸುವುದು. | ಗ್ರಾಮ ಪಂಚಾಯಿತಿ ಮಟ್ಟದ ಮಕ್ಕಳ ಗ್ರಾಮ ಸಭೆಯ 03 ದಿನಗಳ ಮುಂಚಿತವಾಗಿ |
| 25 | ಗ್ರಾಮ ಪಂಚಾಯಿತಿ ಮಟ್ಟದ ಮಕ್ಕಳ ಗ್ರಾಮ ಸಭೆಯನ್ನು ನಡೆಸುವುದು. | ನಿಗದಿ ಪಡಿಸಲಾದ ದಿನದಂದು |
| 26 | ಮಕ್ಕಳ ಗ್ರಾಮ ಸಭೆಯಲ್ಲಿ ಅಂತಿಮಗೊಳಿಸಲಾದ ಮಕ್ಕಳ ಸಮಸ್ಯೆಗಳು/ಬೇಡಿಕೆಗಳು/ಪ್ರಶ್ನೆಗಳನ್ನು ಕ್ರೋಡೀಕರಿಸಿ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸುವುದು. | 10 ಆಗಸ್ಟ್ 2022 ರೊಳಗೆ |
| 27 | ಮಕ್ಕಳ ಗ್ರಾಮ ಸಭೆಯಲ್ಲಿ ಪರಿಹರಿಸಲಾದ ಮಕ್ಕಳ ಸಮಸ್ಯೆಗಳು/ಬೇಡಿಕೆಗಳು/ಪ್ರಶ್ನೆಗಳ ವರದಿಯನ್ನು ಸಿದ್ಧಪಡಿಸುವುದು. | 10 ಆಗಸ್ಟ್ 2022 ರೊಳಗೆ |
| 28 | ಮಕ್ಕಳ ಸಮಸ್ಯೆಗಳು/ಬೇಡಿಕೆಗಳು/ಪ್ರಶ್ನೆಗಳನ್ನು ಕ್ರೋಡೀಕರಿಸಿ ತಯಾರಿಸಲಾದ ಕ್ರಿಯಾ ಯೋಜನೆಯನ್ನು ಗ್ರಾಮ ಪಂಚಾಯಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯುವುದು. | ಮಕ್ಕಳ ಗ್ರಾಮ ಸಭೆಯ ನಂತರ ಗ್ರಾಮ ಪಂಚಾಯಿತಿಯಲ್ಲಿ ನಡೆಸಲಾದ ಮೊದಲ ಸಭೆಯಲ್ಲಿ |
| 29 | ಮಕ್ಕಳ ಸಮಸ್ಯೆಗಳು/ಬೇಡಿಕೆಗಳು/ಪ್ರಶ್ನೆಗಳನ್ನು ಕ್ರೋಡೀಕರಿಸಿ ತಯಾರಿಸಲಾದ ಕ್ರಿಯಾ ಯೋಜನೆಯನ್ನು ಪಂಚತಂತ್ರ ತಂತ್ರಾಂಶದಲ್ಲಿ ಗ್ರಾಮ ಪಂಚಾಯಿತಿಯಿಂದ ಅಳವಡಿಸುವುದು. | ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ಅನುಮೋದನೆಯಾದ ಮೂರು ದಿನಗಳೊಳಗಾಗಿ |
| 30 | ಜಿಲ್ಲಾ ಪಂಚಾಯಿತಿಯಿಂದ ತಮ್ಮ ಜಿಲ್ಲೆಯಲ್ಲಿನ "ಮಕ್ಕಳ ಸ್ನೇಹಿ ಗ್ರಾಮ ಪಂಚಾಯಿತಿ ಅಭಿಯಾನ" ಮತ್ತು ಮಕ್ಕಳ ಗ್ರಾಮ ಸಭೆಯ ಕ್ರೋಡೀಕೃತ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವುದು. | 15 ಆಗಸ್ಟ್ 2022 ರೊಳಗೆ |

| | | |
|---|---|---|
| 31 | ಮಕ್ಕಳ ಸಮಸ್ಯೆಗಳು/ಬೇಡಿಕೆಗಳು/ಪ್ರಶ್ನೆಗಳನ್ನು ಕ್ರೋಡೀಕರಿಸಿ ತಯಾರಿಸಲಾದ ಕ್ರಿಯಾ ಯೋಜನೆಯ ಅನುಷ್ಠಾನದ ವರದಿಯನ್ನು ಗ್ರಾಮ ಪಂಚಾಯಿತಿಯಿಂದ ಪಂಚತಂತ್ರದಲ್ಲಿ ಅಳವಡಿಸುವುದು (update) | ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ಕ್ರಿಯಾಯೋಜನೆ ಅನುಮೋದನೆಯಾದ ನಂತರ ಪ್ರತೀ ತಿಂಗಳಿಗೊಮ್ಮೆ |

## ಅನುಬಂಧ-ಬಿ

"ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ" ಅಂಗವಾಗಿ ಪೂರ್ವಬಾವಿ ಸಭೆಯಲ್ಲಿ ಸುತ್ತೋಲೆಯಲ್ಲಿನ ಎಲ್ಲಾ ಅಂಶಗಳನ್ನು ಎಲ್ಲರ ಗಮನಕ್ಕೆ ತಂದು (ಸಭೆಯಲ್ಲಿ ಓದುವುದರ ಮೂಲಕ), ಚರ್ಚಿಸಿ ಈ ಕೆಳಕಂಡ ಗುರಿಗಳ ಸಾಧನೆಗೆ ಕಾರ್ಯಕ್ರಮ/ಚಟುವಟಿಕೆಗಳನ್ನು ರೂಪಿಸುವುದು ಹಾಗೂ ತಾತ್ಕಾಲಿಕ ಕಾರ್ಯಕ್ರಮಗಳ/ಚಟುವಟಿಕೆಗಳ ವೇಳಾ ಪಟ್ಟಿಯನ್ನು ತಯಾರಿಸುವುದು.

**ಒತ್ತು ಕೊಡಬೇಕಾದ ಹಾಗೂ ಸಾಧಿಸಬೇಕಾದ ಗುರಿಗಳು**

1. ಶೇಕಡ 100 ರಷ್ಟು ಮಕ್ಕಳ ಜನನ ನೊಂದಣಿ ಮತ್ತು ಜನನ ಪ್ರಮಾಣ ಪತ್ರಗಳ ವಿತರಣೆ.
2. ಶೇಕಡ 100 ರಷ್ಟು ಮಕ್ಕಳಿಗೆ ಚುಚ್ಚು ಮದ್ದು.
3. ಶೇಕಡ 100 ರಷ್ಟು 3 ರಿಂದ 6 ವರ್ಷದ ಮಕ್ಕಳು ಅಂಗನವಾಡಿ/ಪೂರ್ವ ಪ್ರಾಥಮಿಕ ಕೇಂದ್ರಗಳಿಗೆ ದಾಖಲಾತಿ ಹಾಗೂ ಹಾಜರಾತಿ.
4. ಶೆಕಡ 100 ರಷ್ಟು ಮಕ್ಕಳಿಗೆ ಪೌಷ್ಟಿಕ ಆಹಾರ/ಅಂಗನವಾಡಿ ಸೇವೆಗಳ ಪೂರೈಕೆ.
5. ಗ್ರಾಮ ಪಂಚಾಯತಿಯಲ್ಲಿನ ತೀವ್ರ ಅಪೌಷ್ಟಿಕ ಮತ್ತು ಮಧ್ಯಮ ತೀವ್ರ ಅಪೌಷ್ಟಿಕ ಮಕ್ಕಳನ್ನು ಪತ್ತೆ ಹಚ್ಚುವುದು ಹಾಗೂ ಅಂಥಹ ಮಕ್ಕಳಿಗೆ ಪೌಷ್ಟಿಕ ಅಂಶವನ್ನು ಒದಗಿಸಲು/ಪೂರೈಸಲು ಕ್ರಮ ಕೈಗೊಳ್ಳುವುದು.
6. ಶೇಕಡ 100ರಷ್ಟು 6 ರಿಂದ 14 ವರ್ಷದ ಮಕ್ಕಳು ಶಾಲೆಗೆ ದಾಖಲಾತಿ ಹಾಗೂ ಹಾಜರಾತಿ ( ಶಾಲೆಗಳ ಪ್ರಾರಂಭದ ಅವಧಿಯಲ್ಲಿ)
7. ಮಕ್ಕಳು ಮತ್ತು ಕಿಶೋರಾವಸ್ಥೆಯ ಕಾರ್ಮಿಕತೆಯಿಂದ ಮುಕ್ತತೆ (ಬಾಲ ಕಾರ್ಮಿಕತೆ ಯಿಂದ ಮುಕ್ತತೆ)
8. ಶೇಕಡ 0 ಬಾಲ್ಯ ವಿವಾಹ ಪ್ರಕರಣ
9. 18 ವರ್ಷ ಪೂರ್ಣಗೊಳ್ಳದ ಶೇಕಡ 100 ರಷ್ಟು ಹೆಣ್ಣು ಮಕ್ಕಳಿಗೆ ಶಿಕ್ಷಣ.
10. ಮಕ್ಕಳ ಜೀತ ಪದ್ಧತಿ ಮುಕ್ತತೆ.
11. ಮಕ್ಕಳ ಸಾಗಾಟ ಮುಕ್ತತೆ (0 ಪ್ರಮಾಣ ಸಾಗಾಟ)
12. ಮಕ್ಕಳ ಸುರಕ್ಷತೆ ಮತ್ತು ಮಕ್ಕಳ ಮೇಲೆ ಆಗುವ ದೌರ್ಜನ್ಯ ತಡೆಯುವುದು.
13. ಶಿಶು ಮರಣ ಪ್ರಮಾಣ ತಗ್ಗಿಸುವುದು.
14. ಮೂಡ ನಂಬಿಕೆಗಳಿಗೆ ಮಕ್ಕಳ ಬಲಿ ಆಗುವುದನ್ನು ಸಂಪೂರ್ಣ ನಿಷೇಧ.
15. ಮಕ್ಕಳ ಬಿಕ್ಷಾಟನೆ ನಿಷೇಧ.
16. ಬೀದಿ ಮಕ್ಕಳು ಇದ್ದಲ್ಲಿ, ಬೀದಿ ಮಕ್ಕಳಿಗೆ ಪುನರ್ವಸತಿ ವ್ಯವಸ್ಥೆ/ಅಗತ್ಯ ಸೌಲಭ್ಯ ಕಲ್ಪಿಸುವುದು.
17. ಹೆಚ್.ಐ.ವಿ. ಸೋಂಕಿತ ಮತ್ತು ದುರ್ಬಲ ವರ್ಗದ ಮಕ್ಕಳಿಗೆ ಅಗತ್ಯ ಬೆಂಬಲ.
18. ಆರೈಕೆ ಮತ್ತು ರಕ್ಷಣೆ ಅವಶ್ಯಕತೆ ಇರುವ ಮಕ್ಕಳಿಗೆ ಅಗತ್ಯ ಬೆಂಬಲ.
19. ವಿಶೇಷ ಅಗತ್ಯಉಳ್ಳ ಮಕ್ಕಳಿಗೆ ಅಗತ್ಯ ಬೆಂಬಲ.
20. ಬಡ ಹಾಗೂ ದುರ್ಬಲ ವರ್ಗದ ಮಕ್ಕಳ ಉನ್ನತ ಶಿಕ್ಷಣಕ್ಕೆ ಬೆಂಬಲ.

21. ಅಂಗನವಾಡಿ ಮತ್ತು ಶಾಲೆಗಳಲ್ಲಿ ಮೂಲಭೂತ ಸೌಕರ್ಯ, ವಿಶೇಷವಾಗಿ ಸ್ವಚ್ಛತೆ ಮತ್ತು ನೈರ್ಮಲ್ಯತೆ.
22. ತೆರೆದ ಗುಂಡಿಗಳನ್ನು, ಬೋರ್‌ವೆಲ್‌ಗಳನ್ನು ಸರಿಯಾದ ಕ್ರಮದಲ್ಲಿ ಮುಚ್ಚಿರುವುದು. ಈ ಗುಂಡಿಗಳ ಮೂಲಕ ಮಕ್ಕಳ ಮರಣವನ್ನು ತಡೆಯುವುದು.
23. ಸರಕು ಸಾಗಣೆ ವಾಹನಗಳಲ್ಲಿ ಮಕ್ಕಳ ಪ್ರಯಾಣ ನಿಷೇದ.
24. ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ದಾರ್ಮಿಕ ಸ್ಥಳ, ಸಾರ್ವಜನಿಕ ಸ್ಥಳಗಳಲ್ಲಿ ಬಿಕ್ಷಾಟನೆ ನಿಷೇಧ ಕುರಿತು ನಾಮ ಫಲಕ ಅಳವಡಿಕೆ.
25. ಯುವಕ, ಯುವತಿಯರಿಗೆ ಕೌಶಲ್ಯ ತರಬೇತಿ ವ್ಯವಸ್ಥೆ.
26. ವಲಸೆ ಕಾರ್ಮಿಕರ ಮಾಹಿತಿ ಮತ್ತು ಟ್ರ್ಯಾಕಿಂಗ್ ವ್ಯವಸ್ಥೆ.

ಅನುಬಂಧ - ೨



## ಮಕ್ಕಳ ಸ್ನೇಹಿ ಗ್ರಾಮಪಂಚಾಯಿತಿಗಳು

**ಮಕ್ಕಳ ಗ್ರಾಮಸಭೆಗೆ ವಿವಿಧ ಇಲಾಖೆಗಳಿಂದ ಸಂಗ್ರಹಿಸಬೇಕಾದ ಮಾಹಿತಿ**

(ವಾರ್ಡ್ ಮಟ್ಟದಲ್ಲಿ ಮಾಹಿತಿ ಸಂಗ್ರಹಣೆ ಮಾಡಿ, ನಂತರ ಪಂಚಾಯಿತಿ ಮಟ್ಟದ ಮಾಹಿತಿಗಳನ್ನು ಕ್ರೋಢೀಕರಿಸಬೇಕು. **೨೦೨೧-೨೦೨೨** ಸಾಲಿನ ಮಾಹಿತಿಯನ್ನು ಸಂಗ್ರಹಿಸಿ ಇದನ್ನು ಆಧರಿಸಿ ಚರ್ಚೆಯನ್ನು ಎಲ್ಲ ಇಲಾಖೆಗಳ ಪ್ರತಿನಿಧಿಗಳ ಸಮ್ಮುಖದಲ್ಲಿ ನಡೆಸಿ ಮಕ್ಕಳಿಗೆ ಸಂಬಂಧಿಸಿದ ಯೋಜನೆಗಳನ್ನು ಮಾಡಬೇಕು)

ಗ್ರಾಮಪಂಚಾಯಿತಿ ಹೆಸರು:___________________ ತಾಲೂಕು:_________________
ಜಿಲ್ಲೆ:_______________

**2015ರ ಮಾನವ ಅಭಿವೃದ್ಧಿ ಸೂಚ್ಯಂಕ ವರದಿಯಂತೆ ಸದರಿ ಗ್ರಾಮಪಂಚಾಯತಿಯ ಸ್ಥಾನಮಾನ/ರ್‍ಯಾಂಕ್: ...............**

(**ನೋಡಿ:** http://www.sirdmysore.gov.in/GPHDI/GPHDIRankingintheState.pdf)

## 1. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

### ಕುಟುಂಬಗಳು

| | ಕುಟುಂಬಗಳು | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಅಲ್ಪಸಂಖ್ಯಾತ | ಒಟ್ಟು |
|---|---|---|---|---|---|
| 1.1 | ಒಟ್ಟು ಕುಟುಂಬಗಳು | | | | |
| 1.2 | ಬಿ.ಪಿ.ಎಲ್. ಕಾರ್ಡ್ ಹೊಂದಿರುವ ಕುಟುಂಬಗಳು | | | | |
| 1.3 | ಅರೆಕಾಲಿಕ ವಲಸೆ ಕುಟುಂಬಗಳು | | | | |
| 1.4 | ನರೇಗಾ ಯೋಜನೆಯಡಿ 100 ದಿನ ಕೆಲಸ ಪಡೆದ ಕುಟುಂಬಗಳು | | | | |
| 1.5 | ಸ್ವಂತ ಶೌಚಾಲಯವನ್ನು ಹೊಂದಿರುವ ಕುಟುಂಬಗಳು | | | | |
| 1.6 | ಸ್ವಂತ ಶೌಚಾಲಯವನ್ನು ಬಳಸುತ್ತಿರುವ ಕುಟುಂಬಗಳು | | | | |
| 1.7 | ಸಮುದಾಯ ಶೌಚಾಲಯವನ್ನು ಬಳಸುತ್ತಿರುವ ಕುಟುಂಬಗಳು | | | | |
| 1.8 | ಮನೆಯೊಳಗೆ ಶುದ್ಧ ನೀರಿನ ಲಭ್ಯತೆ ಹೊಂದಿರುವ ಕುಟುಂಬಗಳು | | | | |
| 1.9 | ಸಮುದಾಯ ನೀರಿನ ಲಭ್ಯತೆ ಹೊಂದಿರುವ ಕುಟುಂಬಗಳ ಸಂಖ್ಯೆ | | | | |

### ಜನಸಂಖ್ಯೆ

| | ಜನಸಂಖ್ಯೆ | ಗಂಡು | ಹೆಣ್ಣು | ಒಟ್ಟು | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಅಲ್ಪಸಂಖ್ಯಾತ |
|---|---|---|---|---|---|---|---|
| 1.10 | ಒಟ್ಟು ಜನಸಂಖ್ಯೆ | | | | | | |
| 1.11 | ಒಟ್ಟು ಮತದಾರರ ಸಂಖ್ಯೆ | | | | | | |

## 2. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

| | ಮಕ್ಕಳ ಸಂಖ್ಯೆ | ಗಂಡು | ಹೆಣ್ಣು | ಒಟ್ಟು | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಅಲ್ಪಸಂಖ್ಯಾತರು | ಅಂಗವಿಕಲತೆಯಿರುವ ಮಕ್ಕಳು | ಪೋಷಕರಿಲ್ಲದ ಮಕ್ಕಳು |
|---|---|---|---|---|---|---|---|---|---|
| 2.1 | 0–3 ವರ್ಷದ ಒಟ್ಟು ಮಕ್ಕಳ ಸಂಖ್ಯೆ | | | | | | | | |
| 2.2 | 0–3 ವರ್ಷದ ಅಂಗನವಾಡಿಗೆ ದಾಖಲಾದ ಮಕ್ಕಳ ಸಂಖ್ಯೆ | | | | | | | | |
| 2.3 | 3–6 ವರ್ಷದ ಒಟ್ಟು ಮಕ್ಕಳ ಸಂಖ್ಯೆ | | | | | | | | |
| 2.4 | 3–6 ವರ್ಷದ ಅಂಗನವಾಡಿಗೆ ದಾಖಲಾದ ಮಕ್ಕಳ ಸಂಖ್ಯೆ | | | | | | | | |
| 2.5 | ಸರಾಸರಿ ಹಾಜರಾಗುವ ಮಕ್ಕಳ ಸಂಖ್ಯೆ | | | | | | | | |
| 2.6 | ಖಾಸಗಿ ಅಂಗನವಾಡಿಗೆ ದಾಖಲಾದ ಮಕ್ಕಳ ಸಂಖ್ಯೆ | | | | | | | | |
| 2.7 | ಅಪೌಷ್ಟಿಕತೆ ಹೊಂದಿರುವ 5 ವರ್ಷದೊಳಗಿನ ಮಕ್ಕಳ ಸಂಖ್ಯೆ | | | | | | | | |
| 2.8 | ಹದಿಹರೆಯದ ಅಪೌಷ್ಟಿಕತೆಗೊಳಗಾಗಿರುವ ಮಕ್ಕಳು | | | | | | | | |
| 2.9 | 18 ವರ್ಷದೊಳಗೆ ಮದುವೆಯಾದ ಮಕ್ಕಳ ಸಂಖ್ಯೆ | | | | | | | | |
| 2.10 | ದತ್ತು ಪಡೆದ ಮತ್ತು ದತ್ತು ಹೋದ ಮಕ್ಕಳ ಕುಟುಂಬಗಳು | | | | | | | | |
| 2.11 | ಪೋಷಕತ್ವ ಅಥವಾ ಇತರೆ ಆರ್ಥಿಕ ನೆರವು ಅಗತ್ಯವಿರುವ ಮಕ್ಕಳ ಸಂಖ್ಯೆ | | | | | | | | |
| 2.12 | ಮಾದಕ ವಸ್ತುಗಳ ಬಳಕೆಯಲ್ಲಿ ಬಿದ್ದಿರುವ ಮಕ್ಕಳು | | | | | | | | |

## 3. ಶಿಕ್ಷಣ ಇಲಾಖೆ

| | ಮಕ್ಕಳ ಸಂಖ್ಯೆ | ಗಂಡು | ಹೆಣ್ಣು | ಒಟ್ಟು | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಅಲ್ಪಸಂಖ್ಯಾತರು | ಅಂಗವಿಕಲತೆಯಿರುವ ಮಕ್ಕಳು | ಪೋಷಕರಿಲ್ಲದ ಮಕ್ಕಳು |
|---|---|---|---|---|---|---|---|---|---|
| 3.1 | 6–14 ವರ್ಷದ ಒಟ್ಟು ಮಕ್ಕಳ ಸಂಖ್ಯೆ | | | | | | | | |
| 3.2 | 6–14 ವರ್ಷದ ಶಾಲೆಗೆ ದಾಖಲಾದ ಮಕ್ಕಳ ಸಂಖ್ಯೆ | | | | | | | | |
| 3.3 | ಸರಾಸರಿ ಹಾಜರಾಗುವ ಮಕ್ಕಳ ಸಂಖ್ಯೆ | | | | | | | | |
| 3.4 | 14–18 ವರ್ಷದ ಒಟ್ಟು ಮಕ್ಕಳ ಸಂಖ್ಯೆ | | | | | | | | |
| 3.5 | ಸರ್ಕಾರೇತರ / ಖಾಸಗಿ ಶಾಲೆಗೆ ದಾಖಲಾದ ಮಕ್ಕಳ ಸಂಖ್ಯೆ | | | | | | | | |
| 3.6 | 14–18 ವರ್ಷದ ಶಾಲೆಗೆ ದಾಖಲಾದ ಮಕ್ಕಳ ಸಂಖ್ಯೆ | | | | | | | | |
| 3.7 | ಸರಾಸರಿ ಹಾಜರಾಗುವ ಮಕ್ಕಳ ಸಂಖ್ಯೆ | | | | | | | | |
| 3.8 | ಖಾಸಗಿ ಶಾಲೆಗೆ ದಾಖಲಾದ ಮಕ್ಕಳ ಸಂಖ್ಯೆ | | | | | | | | |
| 3.9 | ಶಾಲೆಯಿಂದ ಹೊರಗುಳಿದ ಮಕ್ಕಳ ಸಂಖ್ಯೆ | | | | | | | | |
| 3.10 | ಆರ್.ಟಿ.ಇ 25% ಅಡಿಯಲ್ಲಿ ದಾಖಲಾದ ಮಕ್ಕಳ ಸಂಖ್ಯೆ | | | | | | | | |
| 3.11 | ವಿವಿಧ ವಿದ್ಯಾರ್ಥಿವೇತನಗಳನ್ನು ಪಡೆಯುತ್ತಿರುವ ಮಕ್ಕಳ ಸಂಖ್ಯೆ | | | | | | | | |

## 4. ಆರೋಗ್ಯ ಇಲಾಖೆ

| | ವಿವರಣೆ / ಮಕ್ಕಳ ಸಂಖ್ಯೆ | ಒಟ್ಟು | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಅಲ್ಪಸಂಖ್ಯಾತ |
|---|---|---|---|---|---|
| 4.1 | ಈ ವರ್ಷ ಪಂಚಾಯಿತಿ ವ್ಯಾಪ್ತಿಯಲ್ಲಾದ ಹೆರಿಗೆಗಳು | | | | |
| 4.2 | 18 ವರ್ಷದೊಳಗಿನವರಿಗಾದ ಹೆರಿಗೆಗಳು | | | | |
| 4.3 | ನೋಂದಾಯಿತ ಗರ್ಭಿಣಿಯರು | | | | |
| 4.4 | ನೋಂದಾಯಿತ 18 ವರ್ಷದೊಳಗಿನ ಗರ್ಭಿಣಿಯರು | | | | |
| 4.5 | ಹುಟ್ಟಿದ 1 ವಾರದೊಳಗೆ ಮರಣ ಹೊಂದಿದ ಮಕ್ಕಳು | | | | |
| 4.6 | ಹುಟ್ಟಿದ 1 ತಿಂಗಳೊಳಗೆ ಮರಣ ಹೊಂದಿದ ಮಕ್ಕಳು | | | | |
| 4.7 | ಹುಟ್ಟಿದ 1 ವರ್ಷದೊಳಗೆ ಮರಣ ಹೊಂದಿದ ಮಕ್ಕಳು | | | | |
| 4.8 | ಹುಟ್ಟಿದ 5 ವರ್ಷದೊಳಗೆ ಮರಣ ಹೊಂದಿದ ಮಕ್ಕಳು | | | | |
| 4.9 | ಪಂಚಾಯಿತಿ ವ್ಯಾಪ್ತಿಯಲ್ಲಾದ ಒಟ್ಟು ಗರ್ಭಪಾತಗಳು | | | | |
| 4.10 | 18 ವರ್ಷದೊಳಗಿನವರಿಗಾದ ಗರ್ಭಪಾತಗಳು | | | | |
| 4.11 | ಹೆರಿಗೆ ಸಮಯದಲ್ಲಿ ನಿಧನರಾದ ತಾಯಂದಿರು | | | | |
| 4.12 | 18 ವರ್ಷದೊಳಗಿನ ಹೆರಿಗೆ ಸಮಯದಲ್ಲಿ ನಿಧನರಾದ ತಾಯಂದಿರು | | | | |
| 4.13 | ಎಲ್ಲಾ ರೀತಿಯ ರೋಗ ನಿರೋಧಕಗಳನ್ನು ಪಡೆದ 5 ವರ್ಷದೊಳಗಿನ ಮಕ್ಕಳ ಸಂಖ್ಯೆ | | | | |
| 4.14 | ದೀರ್ಘಕಾಲಿಕ ಅಥವಾ ಗಂಭೀರ ಕಾಯಿಲೆಗೆ ತುತ್ತಾದ ಮಕ್ಕಳು | | | | |

## 5. ಪೋಲಿಸ್ ಇಲಾಖೆ

| | ಮಕ್ಕಳ ಸಂಖ್ಯೆ | ಒಟ್ಟು | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಅಲ್ಪಸಂಖ್ಯಾತ |
|---|---|---|---|---|---|
| 5.1 | ಮಕ್ಕಳ ದುಡಿಮೆ ಕುರಿತು ದಾಖಲಾದ ದೂರುಗಳ ಸಂಖ್ಯೆ | | | | |
| 5.2 | ದೂರು ದಾಖಲಾಗದೆ ದುಡಿಮೆಯಲ್ಲಿರುವ ಮಕ್ಕಳ ಸಂಖ್ಯೆ | | | | |
| 5.3 | ಬಾಲ್ಯವಿವಾಹ ಕುರಿತು ದಾಖಲಾದ ದೂರುಗಳ/ ಎಫ್.ಐ.ಆರ್ ಸಂಖ್ಯೆ | | | | |
| 5.4 | ಕಾಣೆಯಾದ ಮಕ್ಕಳ ಕುರಿತು ದಾಖಲಾದ ದೂರುಗಳ/ ಎಫ್.ಐ.ಆರ್ ಸಂಖ್ಯೆ | | | | |
| 5.5 | ಕಾಣೆಯಾದ ಮಕ್ಕಳಲ್ಲಿ ಎಷ್ಟು ಪ್ರಕರಣಗಳು ಕಿಡ್ನಾಪ್/ಅಪಹರಣ/ಸಾಗಣೆಗೆ ಗುರಿಯಾದವರೆಂದು ಎಫ್.ಐ.ಆರ್. ದಾಖಲು | | | | |
| 5.6 | ಮಕ್ಕಳ ಮೇಲೆ ನಡೆದಿರುವ ಅಪರಾಧಗಳ ಕುರಿತು ದಾಖಲಾದ ದೂರುಗಳ/ ಎಫ್.ಐ.ಆರ್ ಸಂಖ್ಯೆ | | | | |
| 5.7 | ಪಾಕ್ಸೋ ಕಾಯಿದೆ (ಲೈಂಗಿಕ ಅಪರಾಧಗಳ ವಿರುದ್ಧ ಮಕ್ಕಳ ರಕ್ಷಣೆ ಕಾಯಿದೆ 2013) ಅಡಿಯಲ್ಲಿ ದಾಖಲಾಗಿರುವ ದೂರುಗಳ / ಎಫ್.ಐ.ಆರ್ ಸಂಖ್ಯೆ | | | | |

ಅನುಬಂಧ-5

## ಪ್ರೀತಿಯ ಮಕ್ಕಳೇ ದಯವಿಟ್ಟು ಗಮನಿಸಿ!

ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆ




ಪ್ರತಿವರ್ಷ ನವೆಂಬರ್ ತಿಂಗಳಿನಲ್ಲಿ ನಾವು, ಹಳ್ಳಿಯಲ್ಲಿ, ಶಾಲೆಯಲ್ಲಿ ಮತ್ತು ನಿಮ್ಮ ಮನೆಯಲ್ಲಿ ಸಹ ಮಕ್ಕಳ ಜೀವನವನ್ನು ಉತ್ತಮಗೊಳಿಸಲು ಮಕ್ಕಳ ಗ್ರಾಮಸಭೆಗಳ ಮೂಲಕ ನಿಮ್ಮ ಸಮಸ್ಯೆಗಳನ್ನು ಹಾಗೂ ಸಲಹೆಗಳನ್ನು ಕೇಳಿಸಿಕೊಳ್ಳುತ್ತಿದ್ದೆವು.

ಈ ವರ್ಷ ಕೋವಿಡ್-19 ನಿಂದಾಗಿ ನಾವು ನಿಮ್ಮನ್ನು ಮುಖಾಮುಖಿ ಭೇಟಿಯಾಗಲು ಸಾಧ್ಯವಾಗದಿದ್ದಲ್ಲಿ, ನಾವು ನಿಮ್ಮನ್ನು ತಲುಪಲು ಹಾಗೂ ನಿಮ್ಮ ಧ್ವನಿಗಳನ್ನು ಕೇಳಿಸಿಕೊಳ್ಳಲು ಹೊಸ ಮಾರ್ಗಗಳನ್ನು ಕಂಡುಕೊಂಡಿದ್ದೇವೆ.

## ನೀವು ಯಾವುದಾದರೂ ಸಮಸ್ಯೆಗಳನ್ನು ಎದುರಿಸುತ್ತಿದ್ದೀರಾ?

- **ನಿಮ್ಮ ಹಳ್ಳಿಯಲ್ಲಿ** - ಮೂಲಭೂತ ಸೌಲಭ್ಯಗಳಾದಂತಹ ನೀರಿನ ಸಮಸ್ಯೆಗಳು, ನೈರ್ಮಲ್ಯದ ಸಮಸ್ಯೆಗಳು, ಶಾಲೆ ಅಥವಾ ಅಂಗನವಾಡಿ ಸೌಲಭ್ಯಗಳು, ಮುಂತಾದವುಗಳು?
- **ಮನೆಯಲ್ಲಿ** – ನಿಮಗೆ ಪೌಷ್ಟಿಕ ಆಹಾರ ದೋರೆಯುತ್ತಿದೆಯೇ? ನೀವು ಆರೋಗ್ಯವಾಗಿದ್ದೀರಾ? ನಿಮಗೆ ಆತಂಕವಾಗುತ್ತಿದೆಯೇ ಅಥವಾ ನಿಮ್ಮನ್ನು ನಿರ್ಲಕ್ಷಿಸಲಾಗುತ್ತಿದೆಯೇ ಅಥವಾ ಯಾವುದಾದರೂ ರೀತಿಯಲ್ಲಿ ನೋವಾಗುತ್ತಿದೆಯೇ?

CHILD LINE 1098 NIGHT & DAY

| | | | | |
|---|---|---|---|---|
|  ನಿಮ್ಮ ಸುತ್ತಲೂ ನೋಡಿ! | ನಿಮ್ಮ ಹಳ್ಳಿಯಲ್ಲಿನ ಸಮಸ್ಯೆಗಳ ಬಗ್ಗೆ ಆಲೋಚಿಸಿ  |  ಮನೆಯಲ್ಲಿನ ಸಮಸ್ಯೆಗಳು |  ನಿಮ್ಮ ಸುರಕ್ಷತೆ ಹಾಗೂ ರಕ್ಷಣೆಗೆ ಸಂಬಂಧಿಸಿದ ಸಮಸ್ಯೆಗಳು (ನಿಂದನೆ, ಬಾಲ್ಯ ವಿವಾಹ, ಬಾಲ ಕಾರ್ಮಿಕ ಪದ್ಧತಿ, ಇತರೆ ಯಾವುದೇ ಕಷ್ಟಗಳು) | ನಿಮಗೆ ತೊಂದರೆ ಉಂಟು ಮಾಡುತ್ತಿರವ ಯಾವುದಾದರೂ ಸಮಸ್ಯೆಗಳು  |

## ಮಕ್ಕಳು ಹುಟ್ಟುತ್ತಲೇ ಪ್ರಜೆಗಳು!

ನೀವು ಒಬ್ಬ ಸಕ್ರಿಯ ನಾಗರಿಕರಾಗಲು, ಬೆಳೆದು ದೊಡ್ಡವರಾಗಲೆಬೇಕೆಂದಿಲ್ಲ!


## ಮಕ್ಕಳ ಕೋರಿಕೆ ಪತ್ರ

- ಯಾವುದೇ ಅಂಗನವಾಡಿ ಶಿಕ್ಷಕರು ಅಥವಾ ನಿಮ್ಮ ಶಾಲಾ ಮುಖ್ಯಶಿಕ್ಷಕರಿಂದ ಮಕ್ಕಳ ಕೋರಿಕೆ ಪತ್ರವನ್ನು ಪಡೆಯಿರಿ ಹಾಗೂ ಅದರಲ್ಲಿ ನಿಮ್ಮ ಸಮಸ್ಯೆಗಳನ್ನು ಭರ್ತಿಮಾಡಿ
- ನಿಮ್ಮ ಕೋರಿಕೆ ಪತ್ರವನ್ನು ನಿಮ್ಮ ಶಾಲೆಯ ಮುಖ್ಯಶಿಕ್ಷಕರು ಅಥವಾ ಅಂಗನವಾಡಿ ಶಿಕ್ಷಕರಿಗೆ ಹಿಂತಿರುಗಿಸಿ
- ನಿಮ್ಮ ಹತ್ತಿರದ ಶಾಲೆಯಲ್ಲಿ/ಅಂಗನವಾಡಿಯಲ್ಲಿ / ಡೈರಿ ಕೇಂದ್ರ/ ಪಂಚಾಯತ್ ಕಚೇರಿ/ ರೇಷನ್ ಅಂಗಡಿ (ನ್ಯಾಯಬೆಲೆ ಅಂಗಡಿ), ಅಂಚೆ ಕಚೇರಿ ಅಥವಾ ಬ್ಯಾಂಕ್ ಈ ಸ್ಥಳದಲ್ಲಿ ಇಟ್ಟಿರುವ ಮಕ್ಕಳ ಧ್ವನಿ ಬಾಕ್ಸ್‌ನಲ್ಲಿ ಹಾಕಿ



## ಮಕ್ಕಳ ಧ್ವನಿ ಬಾಕ್ಸ್

**ಮಕ್ಕಳೇ** – ನಿಮ್ಮ ಸಮಸ್ಯೆಗಳು/ಸಲಹೆಗಳನ್ನು/ಪ್ರಶ್ನೆಗಳನ್ನು ಒಂದು ಹಾಳೆಯಲ್ಲಿ ಬರೆದು, ಅದನ್ನು ಈ **ಮಕ್ಕಳ ಧ್ವನಿ ಬಾಕ್ಸ್‌ನಲ್ಲಿ** ಹಾಕಿ



[illegible]

ಅನುಬಂಧ- ೨

# ಮಕ್ಕಳ ಕೋರಿಕೆ ಪತ್ರ

**ಮಕ್ಕಳೇ – ನಿಮ್ಮ ಸಮಸ್ಯೆಗಳು/ಸಲಹೆಗಳನ್ನು/ಪ್ರಶ್ನೆಗಳನ್ನು ಇಲ್ಲಿ ಹಂಚಿಕೊಳ್ಳಿ**

**ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆ**



ಪ್ರೀತಿಯ ಮಕ್ಕಳೇ, ನಾನು **ನಿಮ್ಮ ಪಂಚಾಯತ್ ಬಾಲಮಿತ್ರ**! ನಿಮ್ಮ ಯೋಗಕ್ಷೇಮ ನನ್ನ ಆದ್ಯತೆಯಾಗಿದೆ! ನಾವು ನಿಮ್ಮನ್ನು ತಲುಪಲು ಹಾಗೂ ನಿಮ್ಮ ಸಮಸ್ಯೆಗಳನ್ನು ಕೇಳಿಸಿಕೊಳ್ಳಲು ಹೊಸ ಮಾರ್ಗದೊಂದಿಗೆ ಬಂದಿರುವೆವು!

## ನೀವು ಯಾವುದಾದರೂ ಸಮಸ್ಯೆಗಳನ್ನು ಎದುರಿಸುತ್ತಿದ್ದೀರಾ?

- **ನಿಮ್ಮ ಹಳ್ಳಿಯಲ್ಲಿ -** ಮೂಲಭೂತ ಸೌಲಭ್ಯಗಳಾದಂತಹ ನೀರಿನ ಸಮಸ್ಯೆಗಳು, ನೈರ್ಮಲ್ಯದ ಸಮಸ್ಯೆಗಳು, ಶಾಲೆ ಅಥವಾ ಅಂಗನವಾಡಿ ಸೌಲಭ್ಯಗಳು, ಮುಂತಾದವುಗಳು?
- **ಮನೆಯಲ್ಲಿ –** ನಿಮಗೆ ಪೌಷ್ಟಿಕ ಆಹಾರ ದೋರೆಯುತ್ತಿದೆಯೇ? ನೀವು ಆರೋಗ್ಯವಾಗಿದ್ದೀರಾ? ನಿಮಗೆ ಆತಂಕವಾಗುತ್ತಿದೆಯೇ ಅಥವಾ ನಿಮ್ಮನ್ನು ನಿರ್ಲಕ್ಷಿಸಲಾಗುತ್ತಿದೆಯೇ ಅಥವಾ ಯಾವುದಾದರೂ ರೀತಿಯಲ್ಲಿ ನೋವಾಗುತ್ತಿದೆಯೇ?

- ನಿಮ್ಮ ಸಮಸ್ಯೆಗಳನ್ನು ಮಕ್ಕಳ ಕೋರಿಕೆ ಪತ್ರದಲ್ಲಿ ಭರ್ತಿಮಾಡಿ ನಿಮ್ಮ ಅಂಗನವಾಡಿ ಶಿಕ್ಷಕರು ಅಥವಾ ನಿಮ್ಮ ಶಾಲಾ ಮುಖ್ಯಶಿಕ್ಷಕರಿಗೆ ಹಿಂತಿರುಗಿಸಿ ಅಥವಾ ನಿಮಗೆ ಹತ್ತಿರವಿರುವ ಮಕ್ಕಳ ಧ್ವನಿ ಬಾಕ್ಸ್‌ಗೆ ಹಾಕಬಹುದು!
- ನಿಮ್ಮ ಸಮಸ್ಯೆಗಳು/ಸಲಹೆಗಳನ್ನು ಯಾವುದಾದರು ಹಾಳೆಯಲ್ಲಿಯು ಕೂಡ ಬರೆದು ಅದನ್ನು ನಿಮಗೆ ಹತ್ತಿರವಿರುವ ಮಕ್ಕಳ ಧ್ವನಿ ಬಾಕ್ಸ್‌ನಲ್ಲಿ ಹಾಕಬಹುದು!

CHILD LINE 1098 NIGHT & DAY

**ನೀವು ಅಥವಾ ನಿಮಗೆ ಗೊತ್ತಿರುವ ಮಗುವು ತೊಂದರೆಯಲ್ಲಿದ್ದೀರಾ? 1098 ಗೆ ಕರೆ ಮಾಡಿ, ನೀವು ಬಯಸಿದರೆ ನಾವು ನಿಮ್ಮ ಗುರುತನ್ನು ರಕ್ಷಿಸಲಾಗುವುದು**

**ಮಕ್ಕಳ ಧ್ವನಿ ಬಾಕ್ಸ್‌ನನ್ನು ಶಾಲೆಯಲ್ಲಿ/ಅಂಗನವಾಡಿಯಲ್ಲಿ / ಡೈರಿ ಕೇಂದ್ರ/ ಪಂಚಾಯತ್ ಕಚೇರಿ/ ರೇಷನ್ ಅಂಗಡಿ (ನ್ಯಾಯಬೆಲೆ ಅಂಗಡಿ), ಅಂಚೆ ಕಚೇರಿ ಅಥವಾ ಬ್ಯಾಂಕ್‌ಗಳಲ್ಲಿ ಇಡಲಾಗಿದೆ**

**ಮಕ್ಕಳು ಹುಟ್ಟುತ್ತಲೇ ಪ್ರಜೆಗಳು! ನೀವು ಒಬ್ಬ ಸಕ್ರಿಯ ನಾಗರಿಕರಾಗಲು, ಬೆಳೆದು ದೊಡ್ಡವರಾಗಲೆಬೇಕೆಂದಿಲ್ಲ!**

ಗ್ರಾಮ ಪಂಚಾಯತಿಯ ಹೆಸರು : ______________________ ಕೋರಿಕೆ ನಮೂನೆಯ ಸಂಖ್ಯೆ. *[ಬಾಲಮಿತ್ರ ತುಂಬಬೇಕಾದ ವಿವರ]*

ಹಳ್ಳಿಯ ಹೆಸರು : ______________ ತಾಲ್ಲೂಕು : ______________ ಜಿಲ್ಲೆ: ______________

ನಿಮ್ಮ ಹೆಸರು (ನಿಮಗೆ ಇಷ್ಟವಿದ್ದರೆ ಮಾತ್ರ ಬರೆಯಿರಿ): ______________

ನಿಮ್ಮ ವಿಳಾಸ (ನಿಮಗೆ ಇಷ್ಟವಿದ್ದರೆ ಮಾತ್ರ): ______________________________

ನಿಮ್ಮ ಕೋರಿಕೆ/ ಸಮಸ್ಯೆ (ಪತ್ರದ ಹಿಂಬದಿಯಲ್ಲು ಬರೆಯಬಹುದು):

ಸಮಸ್ಯೆಯು ನಿಮ್ಮ ಪ್ರದೇಶದ ಮೂಲ ಸೌಕರ್ಯಕ್ಕೆ ಸಂಬಂಧಿಸಿದ್ದಾಗಿದ್ದಲ್ಲಿ ನಿಮ್ಮ ಸರಿಯಾದ ವಿಳಾಸ ಮತ್ತು ಸ್ಥಳದ ವಿವರಗಳನ್ನು ನೀಡುವುದನ್ನು ಖಚಿತಪಡಿಸಿಕೊಳ್ಳಿ

ದಿನಾಂಕ:______________ ನಿಮ್ಮ ಸಹಿ: ______________

ಬಾಲಮಿತ್ರ ತುಂಬಬೇಕಾದ ವಿವರ

ಕೋರಿಕೆ ನಮೂನೆಯ ಸಂಖ್ಯೆ:

ಬಾಲಮಿತ್ರರ ಸಹಿ ಮತ್ತು ಮೊಹರು

"ಮಕ್ಕಳ ಗ್ರಾಮ ಸಭೆ"

**ನಮೂನೆ-1 (ಮಕ್ಕಳ ಸಮಸ್ಯೆಗಳ/ಬೇಡಿಕೆಗಳ/ಪ್ರಶ್ನೆಗಳ ಪಟ್ಟಿ)**

**ಪ್ರಾಥಮಿಕ/ಅಂತಿಮ ಪಟ್ಟಿ/ಸಭಾ ನಡಾವಳಿ**

ಜಿಲ್ಲೆ : ತಾಲ್ಲೂಕು: ಗ್ರಾಮ ಪಂಚಾಯತಿ ಹೆಸರು:

**ಸಂಗ್ರಹಿಸಲಾದ ಮೂಲ:** ಫೇಸ್ ಬುಕ್ ಪೇಜಿನಿಂದ/ಧ್ವನಿ ಪೆಟ್ಟಿಗೆಯಿಂದ ಗ್ರಾಮ/ವಾರ್ಡ್ ಮಟ್ಟದ ಸಭೆಯಿಂದ/ಗ್ರಾಮ ಪಂಚಾಯತಿ ಮಟ್ಟದ ಸಭೆಯಿಂದ ಗ್ರಾಮ/ವಾರ್ಡ್ ಮಟ್ಟದ/ಗ್ರಾಮಪಂಚಾಯತಿ ಮಟ್ಟದ ಮಕ್ಕಳ ಗ್ರಾಮ ಸಭೆ

ಸಭೆ ನಡೆಸಲಾದ ಸ್ಥಳ: ದಿನಾಂಕ:

| ಕ್ರಮ ಸಂಖ್ಯೆ | ವಿಷಯ/ಸಮಸ್ಯೆ/ಬೇಡಿಕೆ/ಪ್ರಶ್ನೆ | ವಿಷಯ/ಸಮಸ್ಯೆ/ಬೇಡಿಕೆ/ಪ್ರಶ್ನೆ ಸಂಬಂಧ ಪಡುವ ಕ್ಷೇತ್ರ | ಸಮಸ್ಯೆ/ಬೇಡಿಕೆ/ಪ್ರಶ್ನೆ ಸಂಬಂಧ ಪಡುವ ಭೌಗೋಳಿಕ ಪ್ರದೇಶ/ಸ್ಥಳ | ಚರ್ಚಿಸಲಾದ ಅಂಶಗಳು– ಸಂಕ್ಷಿಪ್ತವಾಗಿ | ತೆಗೆದುಕೊಳ್ಳಲಾದ ನಿರ್ಣಯ/ ಠರಾವು | ನಿರ್ಣಯ/ಠರಾವನ್ನು ಜಾರಿಗೊಳಿಸಬೇಕಾದ ಜವಬ್ದಾರಿ (ಇಲಾಖೆ ಮತ್ತು ಅಧಿಕಾರಿ) | ಜಾರಿಗೊಳಿಸಲು ನಿಗದಿಪಡಿಸಲಾದ ಕಾಲಾವದಿ | ಷರಾ |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| | | | | | | | | |
| | | | | | | | | |
| | | | | | | | | |
| | | | | | | | | |
| | | | | | | | | |
| | | | | | | | | |

ಸಭೆಯಲ್ಲಿ ಹಾಜರಿದ್ದವರು:

| ಕ್ರಮ ಸಂಖ್ಯೆ | ಹೆಸರು (ಮಕ್ಕಳು, ಅಧಿಕಾರಿಗಳು, ಅಧಿಕಾರೇತರರು) | ಲಿಂಗ | ವಯಸ್ಸು | ಓದುತ್ತಿರುವ ತರಗತಿ/ಶಿಕ್ಷಣ ಮಟ್ಟ/ (ಮಕ್ಕಳಾಗಿದ್ದಲ್ಲಿ) | ಹುದ್ದೆ/ ಇಲಾಖೆ/ ಸಂಸ್ಥೆಯ ಹೆಸರು (ಇಲಾಖೆ ಮತ್ತು ಇಲಾಖೇತರರ) | ದೂರವಾಣಿ/ಮೊಬೈಲ್ ಸಂಖ್ಯೆ | ಸಹಿ |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| | | | | | | | |
| | | | | | | | |
| | | | | | | | |

**ಸೂಚನೆ:** (1) ವಿಷಯ/ಸಮಸ್ಯೆ/ಬೇಡಿಕೆ/ಪ್ರಶ್ನೆ ಸಂಬಂಧ ಪಡುವ ಕ್ಷೇತ್ರದ ಕಾಲಂನಲ್ಲಿ –ಶಿಕ್ಷಣ, ಆರೋಗ್ಯ, ರಕ್ಷಣೆ, ಆಹಾರ ಮತ್ತು ಪೌಷ್ಟಿಕತೆ, ವಿಪತ್ತು ನಿರ್ವಹಣೆ, ನೀರು/ನೈರ್ಮಲ್ಯ/ಶುಚಿತ್ವ, ರಸ್ತೆ/ಸಾರ್ವಜನಿಕ ಕಟ್ಟಡ, ವಸತಿ, ಮಾನವ ಸಂಪನ್ಮೂಲ, ಇತ್ಯಾದಿ ನಮೂದಿಸುವುದು.

(2) ಮಕ್ಕಳ ಗ್ರಾಮ ಪಂಚಾಯತಿ ಸಭೆಯ ನಡಾವಳಿಗಾಗಿಯೇ ಪ್ರತ್ಯೇಕ ಪುಸ್ತಕ ಇಡುವುದು ಈ ನಮೂನೆಯನ್ನು ಬಳಸುವುದು.

(3) **ಪ್ರಾಥಮಿಕ ಪಟ್ಟಿ:** ಸಮಸ್ಯೆ/ಬೇಡಿಕೆ/ಪ್ರಶ್ನೆಗಳ ಪಟ್ಟಿಯನ್ನು ಗ್ರಾಮ/ವಾರ್ಡ್ ಮಟ್ಟದಲ್ಲಿ ನಡೆಸಲಾದ ಸಭೆಯ ಮೂಲಕ, ಸಮಸ್ಯೆ/ಬೇಡಿಕೆ/ಪ್ರಶ್ನೆ ಪೆಟ್ಟಿಗೆಯಲ್ಲಿ (ಧ್ವನಿ ಪೆಟ್ಟಿಗೆ)ಸಂಗ್ರಹಿಸಿದ ಹಾಗೂ ಫೇಸ್ ಬುಕ್ ಪೇಜಿನಲ್ಲಿ ಬಂದ ಸಮಸ್ಯೆ/ಬೇಡಿಕೆ/ಪ್ರಶ್ನೆ ಪ್ರತ್ಯೇಕವಾಗಿ ತಯಾರಿಸುವುದು. (ಪ್ರಾಥಮಿಕ ಪಟ್ಟಿ).

(4) **ಅಂತಿಮ ಕ್ರೋಢೀಕೃತ ಪಟ್ಟಿ:** ಒಂದೇ ಸಮಸ್ಯೆ/ಬೇಡಿಕೆ/ಪ್ರಶ್ನೆಯನ್ನು ಒಬ್ಬರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಕೇಳಿರುವ ಹಾಗೂ ಪುನರಾವರ್ತನೆ ಆಗಿರ ಬಹುದು. ಕಾರಣ ವಿವಿಧ ಮೂಲಗಳಿಂದ ಮೂಡಿ ಬಂದ ಸಮಸ್ಯೆ/ಬೇಡಿಕೆ/ಪ್ರಶ್ನೆಗಳ ಪಟ್ಟಿಯನ್ನು ಮಕ್ಕಳ ಗ್ರಾಮ ಸಭೆಯಲ್ಲಿ ಮಂಡಿಸಿ, ಚರ್ಚಿಸಿ ಕ್ಷೇತ್ರ ಮತ್ತು ಪ್ರಾದೇಶಿಕವಾರು ಕ್ರೋಢೀಕರಿಸಿ ಅಂತಿಮ ಪಟ್ಟಿ ತಯಾರಿಸುವುದು.

(5) ಗ್ರಾಮ ಪಂಚಾಯತಿ ಮಕ್ಕಳ ಗ್ರಾಮ ಸಭೆಯಲ್ಲಿ ಚರ್ಚಿಸಿ, ನಿರ್ಣಯ ಮತ್ತು ಜವಬ್ದಾರಿ ಹಾಗೂ ಕಾಲಾವಧಿಯನ್ನು ದಾಖಲಿಸುವುದು.

(6) ಸಭೆಯಲ್ಲಿ ಹಾಜರಿದ್ದ ಎಲ್ಲಾ ಮಕ್ಕಳು, ಅಧಿಕಾರಿ ಹಾಗೂ ಅಧಿಕಾರೇತರರ ವಿವರ ಮತ್ತು ಸಹಿ ಪಡೆಯುವುದು.

"ಮಕ್ಕಳ ಗ್ರಾಮ ಸಭೆ"

**ನಮೂನೆ-2 (ಮಕ್ಕಳ ಸಮಸ್ಯೆಗಳ/ಬೇಡಿಕೆಗಳ/ಪ್ರಶ್ನೆಗಳ ಅನುಷ್ಠಾನಕ್ಕೆ ಕ್ರಿಯಾ ಯೋಜನೆ)**

ಕ್ರಿಯಾ ಯೋಜನೆ------ವರ್ಷ

ಜಿಲ್ಲೆ : ತಾಲ್ಲೂಕು: ಗ್ರಾಮ ಪಂಚಾಯತಿ ಹೆಸರು:

ಗ್ರಾಮಪಂಚಾಯತಿ ಮಟ್ಟದ ಮಕ್ಕಳ ಗ್ರಾಮ ಸಭೆ

ಸಭೆ ನಡೆಸಲಾದ ಸ್ಥಳ: ದಿನಾಂಕ:

| ಕ್ರಮ ಸಂಖ್ಯೆ | ಸಮಸ್ಯೆ/ಬೇಡಿಕೆ/ಪ್ರಶ್ನೆ | ಸಮಸ್ಯೆ/ಬೇಡಿಕೆ/ಪ್ರಶ್ನೆ ಸಂಬಂಧ ಪಡುವ ಕ್ಷೇತ್ರ | ಸಮಸ್ಯೆ/ಬೇಡಿಕೆ /ಪ್ರಶ್ನೆ ಸಂಬಂಧ ಪಡುವ ಬೌಗೋಳಿಕ ಪ್ರದೇಶ/ಸ್ಥಳ | ಸಮಸ್ಯೆ/ಬೇಡಿಕೆ/ ಪ್ರಶ್ನೆ ಬಗ್ಗೆ ತೆಗೆದುಕೊಳ್ಳಲಾದ ನಿರ್ಣಯ/ ಠರಾವು | ನಿರ್ಣಯ/ಠರಾವನ್ನು ಜಾರಿಗೊಳಿಸಬೇಕಾದ ಜವಬ್ದಾರಿ (ಇಲಾಖೆ ಮತ್ತು ಅಧಿಕಾರಿ) | ಜಾರಿಗೊಳಿಸಲು ನಿಗದಿಪಡಿಸ ಲಾದ ಕಾಲಾವದಿ | ಷರಾ |
|---|---|---|---|---|---|---|---|
| 1 | 2 | 3 | 4 | 5 | 6 | 6 | 7 |
| | | | | | | | |
| | | | | | | | |
| | | | | | | | |
| | | | | | | | |
| | | | | | | | |

ಕ್ಷೇತ್ರಗಳು: ಸಮಸ್ಯೆ/ಬೇಡಿಕೆ/ಪ್ರಶ್ನೆ ಸಂಬಂಧ ಪಡುವ ಕ್ಷೇತ್ರ-ಶಿಕ್ಷಣ, ಆರೋಗ್ಯ, ರಕ್ಷಣೆ, ಆಹಾರ ಮತ್ತು ಪೌಷ್ಟಿಕತೆ, ವಿಪತ್ತು ನಿರ್ವಹಣೆ, ನೀರು/ನೈರ್ಮಲ್ಯ/ಶುಚಿತ್ವ, ರಸ್ತೆ/ಸಾರ್ವಜನಿಕ ಕಟ್ಟಡ, ವಸತಿ, ಮಾನವ ಸಂಪನ್ಮೂಲ, ಇತರೆ

ದೃಢೀಕರಣ

1. ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ:
   (ಹೆಸರು, ಸಹಿ ಮತ್ತು ಕಚೇರಿ ಸೀಲ್)

2. ಗ್ರಾಮ ಪಂಚಾಯತಿ ಅಧ್ಯಕ್ಷರು/ಆಡಳಿತಾಧಿಕಾರಿ:
   (ಹೆಸರು, ಸಹಿ ಮತ್ತು ಕಚೇರಿ ಸೀಲ್)